ಉಪನ್ಯಾಸ
ಗ್ರಂಥಮಾಲೆ

೨೪೦

ಕಬ್ಬು

ಎಮ್. ರಾಮದಾಸ ಕಾಮತ
ಬಿ.ಎಸ್‌ಸಿ. (ಅಗ್ರಿ.)

ಆಂವೇ ಗುರು

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮೇ, ೧೯೭೬

ರಜತಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೪೦

ಕಬ್ಬು

ಎಸ್. ರಾಮದಾಸ ಕಾಮತ,

ಬಿ.ಎಸ್ಸಿ. (ಅಗ್ರಿ.)

ಕರ್ನಾಟಕ ವಿಶ್ವವಿದ್ಯಾಲಯ,

ಧಾರವಾಡ

ಮೇ, ೧೯೭೬

ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಥಮ ಮುದ್ರಣ : ೫೦೦೦ ಪ್ರತಿಗಳು
ಮೇ, ೧೯೭೬

ಬೆಲೆ: ೨೫ ಪೈಸೆ

ಮುದ್ರಕರು :
ಎಮ್. ಜಿ. ಸಾಲೇಕರ
ವಸಂತ ಮುದ್ರಣಾಲಯ
ಧಾರವಾಡ–೧

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗು ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನ-ಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವ-ವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆ-ಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನ-ಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ-ಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯು-ತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವ-ವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜ-ವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ-ದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರೆವಣಿಗೆ-ಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೩೯ ಪುಸ್ತಕಗಳು ಪ್ರಕಟ-ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರು ವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆ-ಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ-ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೨೭-೫-೧೯೭೬

ಆರ್. ಸಿ. ಹಿರೇಮಠ
ಕುಲಪತಿಗಳು

ಅರಿಕೆ

ವ್ಯವಸಾಯ ಇಲಾಖೆಯಲ್ಲಿ ನನಗೆ ಗೆಜೆಟೆಡ್ ಅಧಿಕಾರಿಯಾಗಿ ಬಡ್ತಿಯಾದಾಗ ಕಬ್ಬು ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಎಂದು ನೇಮಕ ಮಾಡಿದರು. ಸರಕಾರಿ ಕೆಲಸ ಸೇರುವ ಮುಂಚೆ ಒಂದು ಖಾಸಗಿ ಸಕ್ಕರೆ ಕಾರಖಾನೆಯಲ್ಲಿ "ಜೂನಿಯರ ಕೇನ್ ಆಫೀಸರ" ಎಂದು ೨೦೦ ಎಕರೆ ಕಬ್ಬು ಬೆಳೆಯನ್ನು ಮೇಲುಸ್ತುವಾರಿ ಮಾಡುವಾಗ ಆದ ಜ್ಞಾನ, ಹಾಗೆಯೇ ಕಬ್ಬು ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡುವಾಗ ದೊರಕಿದ ತಿಳಿವಳಿಕೆ ಮತ್ತು ತಮಿಳುನಾಡಿನ ಕೊಯಿಮತ್ತೂರಿನಲ್ಲಿರುವ Sugarcane Breeding Institution ದಲ್ಲಿ ಆದ ತರಬೇತಿ ಮುಂತಾದವುಗಳು ಕಬ್ಬು ಬೆಳೆಯ ಬಗ್ಗೆ ಸ್ವಲ್ಪಮಟ್ಟಿಗೆ ಅನುಭವವನ್ನು ತಂದುಕೊಟ್ಟವು. ಎಲ್ಲಕ್ಕಿಂತಲೂ ರಾಜ್ಯದ ಆಗಿನ ಕೃಷಿ ನಿರ್ದೇಶಕರಾದ ಡಾ. ಹ. ರಾ. ಅರಕೇರಿ ಇವರ ಬೆಂಬಲ ನನಗೆ ಬೇಕಾದಷ್ಟು ಸಹಾಯ ಮಾಡಿತು. ಸರಕಾರಿ ನಿಯಮಗಳ ಪ್ರಕಾರ ನನಗೆ ಬೆಂಗಳೂರಿನಿಂದ ವರ್ಗವಾಗಿ ಧಾರವಾಡದ ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರದಲ್ಲಿ ಅಧ್ಯಾಪಕನಾಗಿ ಕೆಲಸ ಮಾಡುವ ಸಮಯದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ವ್ಯಾಸಂಗ ವಿಸ್ತರಣಾ ಉಪನ್ಯಾಸ ಮಾಲಿಕೆಯ ಅಂಗವಾಗಿ ಕಬ್ಬಿನ ಬಗ್ಗೆ ಉಪನ್ಯಾಸ ಮಾಡುವ ಅವಕಾಶ ಕಲ್ಪಿಸಿ ಕೊಟ್ಟರು. ಅನಂತರ ಸಹಾಯಕ ಕೃಷಿ ನಿರ್ದೇಶಕ ಅಧಿಕಾರಿ,

ಧಾರವಾಡ ವಿಭಾಗ, ಧಾರವಾಡ ಆಗಿರುವಾಗಲೂ ಎರಡನೇ ಸಲ ಉಪನ್ಯಾಸ ಮಾಡಲು ಅವಕಾಶ ಒದಗಿಸಿಕೊಟ್ಟರು. ಅಂತಹ ಸಂದರ್ಭಗಳಲ್ಲಿ ಸೂಚಿಸಲ್ಪಟ್ಟ ಅಭಿಪ್ರಾಯಗಳ ಮೇರೆಗೆ, ಮೆಚ್ಚುಗೆ ಕಂಡುಬಂದುದರಿಂದ, ನನ್ನ ವಿಚಾರಸರಣಿಗಳನ್ನು ಪುಸ್ತಕರೂಪ ಕೊಡಲು ಅಪೇಕ್ಷಿಸಿದ್ದರಿಂದ, ಈ ಕಿರುಹೊತ್ತಿಗೆಯನ್ನು ಸಾಮಾನ್ಯ ರೈತ ಬಾಂಧವರಿಗೆ ಮನದಟ್ಟಾಗುವ ರೀತಿಯಲ್ಲಿ ಮತ್ತು ಸರಳ ಶೈಲಿಯಲ್ಲಿ ತರಲು ಪ್ರಯತ್ನಿಸಿದ್ದೇನೆ.

ಈ ಕಾರ್ಯದಲ್ಲಿ ನನಗೆ ಶ್ರೀ ಎಲ್. ಜಿ. ಅಗಡಿ, A.A.O. ಶ್ರೀ ಎಸ್. ಎಮ್. ಮರಗಾಲ, A.A.O. ಹಾಗೂ ಶ್ರೀ ಸಿ. ಎನ್. ಕಾಮತ, G. S. ಇವರುಗಳು ನೆರವಾಗಿದ್ದಾರೆ. ಇದಲ್ಲದೆ ತಕ್ಕ ಅಭಿಪ್ರಾಯ ಬರೆದು ಡಾ. ಹ. ರಾ. ಅರಕೇರಿ, ಕುಲಪತಿ ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ; ಬೆಂಗಳೂರ, ಇವರು ಪ್ರೋತ್ಸಾಹಿಸಿದ್ದಾರೆ ಇದನ್ನು ಪ್ರಕಟಿಸಲು ವ್ಯವಸಾಯ ಇಲಾಖೆಯ ನಿರ್ದೇಶಕರಾದ ಡಾ. ಆರ್. ದ್ವಾರಕಿನಾಥ ಇವರು ಅನುಮತಿಸಿದ್ದಾರೆ. ಇವರೆಲ್ಲರಿಗೂ ನಾನು ಋಣಿ.

ಎಲ್ಲಕ್ಕಿಂತಲೂ ಹೆಚ್ಚಾಗಿ ನನಗೆ ಈ ದಿಶೆಯಲ್ಲಿ ಪ್ರೋತ್ಸಾಹ ಕೊಟ್ಟ ಕರ್ನಾಟಕ ವಿಶ್ವವಿದ್ಯಾನಿಲಯದ ಅಧಿಕಾರಿವರ್ಗದವರಿಗೆ ಚಿರಋಣಿಯಾಗಿದ್ದೇನೆ.

ಧಾರವಾಡ
೩೧-೧೦-೧೯೭೫

ಎಮ್. ರಾಮದಾಸ ಕಾಮತ
ಸಹಾಯಕ ಕೃಷಿ ನಿರ್ದೇಶಕ,
ಧಾರವಾಡ ವಿಭಾಗ

ಅಭಿಪ್ರಾಯ

ಕಬ್ಬು ದೇಶದ ಮುಖ್ಯ ಬೆಳೆಗಳಲ್ಲೊಂದು. ವಿಶ್ವಮಾರು ಕಟ್ಟೆಯಲ್ಲಿ ಸಕ್ಕರೆಗೆ ಹೆಚ್ಚಿನ ಬೇಡಿಕೆಯಿದೆ. ನಾವು ಉತ್ಪನ್ನ ಹೆಚ್ಚಿಸಿ ಈ ಬೇಡಿಕೆಯನ್ನು ಪೂರೈಸುವುದಾದರೆ ನಮಗೆ ಅತ್ಯಗತ್ಯ ವಿರುವ ವಿದೇಶಿ ವಿನಿಮಯವನ್ನು ವೃದ್ಧಿಗೊಳಿಸುವುದು ಸಾಧ್ಯ. ಈ ದೃಷ್ಟಿಯಿಂದ ನಮ್ಮ ಕಬ್ಬಿನ ಕೃಷಿಯಲ್ಲಿ ದಕ್ಷತೆ ಮೂಡಿಸಿ ಕೊಂಡು ಹೆಚ್ಚಿನ ಇಳುವರಿ ಪಡೆದುಕೊಳ್ಳುವುದು ಆಗಬೇಕಾದ ಕೆಲಸ.

ನಮ್ಮ ದೇಶದಲ್ಲಿ ರೈತರು ರೊಕ್ಕದ ಬೆಳೆ ಎಂದರೆ ಮೊದಲು ಯೋಚಿಸುವುದು ಕಬ್ಬು. ನಮ್ಮಲ್ಲಿ ಕಬ್ಬಿನ ಬೆಳೆ ಅಪರ್ಣೇಯವಾಗಿ ಬೆಳೆದು ಬಂದಿದೆ. ಅಂದರೆ, ನಮ್ಮ ರೈತರಿಗೆ ಇದರ ಬಗ್ಗೆ ಸಾಕಷ್ಟು ಅನುಭವವಿದೆ ಎಂದ ಹಾಗಾಯಿತು. ಈ ಬೆಳೆಯ ಸುಧಾರಣೆಯನ್ನು ಕುರಿತ ಚಿಂತನೆ, ಹಾಗೂ ಸಂಶೋಧನೆ ದೇಶದಲ್ಲಿ ಕಳೆದ ೫೦ ವರ್ಷಗಳಿಂದ ನಡೆದು ಬಂದಿದೆ. ಅನೇಕ ಹೊಸ ತಳಿಗಳು ಬಳಕೆಗೆ ಬಂದಿವೆ. ತಳಿ ಸುಧಾರಣೆಯಲ್ಲದೆ, ಗೊಬ್ಬರ, ಸಸ್ಯ ಸಂರಕ್ಷಣೆ ಈ ವಿಷಯಗಳಿಗೆ ಸಂಬಂಧಿಸಿ ದಂತೆಯೂ ಹೆಚ್ಚಿನ ಕೆಲಸ ನಡೆದು ಹೊಸ ವಿಷಯಗಳು ಹೊರಬಂದಿವೆ. ಇವೆಲ್ಲವುಗಳ ಅಳವಡಿಕೆಯಿಂದ ಇಳುವರಿಯನ್ನು ಗಣನೀಯವಾಗಿ ಹೆಚ್ಚಿಸುವುದು ಸಾಧ್ಯ. ಇದಾಗಬೇಕಾದರೆ ಈ ಬೆಳೆ ಕೃಷಿ ಬಗ್ಗೆ ರೈತರ ತಿಳಿವಳಿಕೆ ಮಟ್ಟ ಬೆಳೆಯಬೇಕು.

ಈ ಸಣ್ಣ ಹೊತ್ತಿಗೆಯಲ್ಲಿ ಶ್ರೀ ಎಂ. ರಾಮದಾಸ ಕಾಮತ ರವರು ಈ ಅವಶ್ಯಕತೆಯನ್ನು ಪೂರೈಸಲು ಪ್ರಯತ್ನ ಪಟ್ಟಿದ್ದಾರೆ. ಉತ್ತಮ ಕಬ್ಬಿನ ಬೇಸಾಯಕ್ಕೆ ಆಧಾರಗಳಾದ ಮಣ್ಣು, ಹವಾಗುಣ, ಬೇಸಾಯಕ್ರಮಗಳು, ಬೀಜ, ನೀರಾವರಿ, ಕೀಟ, ರೋಗಗಳ ಹತೋಟಿ— ಇಂಥಾ ಎಲ್ಲಾ ವಿಷಯಗಳನ್ನು ಕುರಿತ ಸವಿವರ ಮಾಹಿತಿ ಒದಗಿಸಿದ್ದಾರೆ. ತಾಂತ್ರಿಕ ವಿಷಯವನ್ನು ಸಾಮಾನ್ಯ ರೈತರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಬರೆದಿದ್ದಾರೆ. ಅನೇಕ ವರ್ಷಗಳು ವ್ಯವಸಾಯ ಇಲಾಖೆಯಲ್ಲಿ ಕಬ್ಬಿನ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕೆಲಸ ಮಾಡಿ, ಬರೆದಿರುವ ವಿಷಯದ ಬಗ್ಗೆ ಇವರು ವಿಶೇಷ ಪರಿಣತಿ ಪಡೆದಿದ್ದಾರೆ. ಈ ವಿಶೇಷ ಪರಿಣತಿಯ ಫಲವನ್ನು ಈ ಪುಸ್ತಕದಲ್ಲಿ ನಾವು ಕಾಣಬಹುದು. ಈ ಪುಟ್ಟ ಪುಸ್ತಕ ರೈತರ ಅವಗಾಹನೆಗೆ ಬಂದು ರಾಜ್ಯದ ಕಬ್ಬಿನ ಬೆಳೆ ಸುಧಾರಣೆ ಗತಿ ಉತ್ತಮವಾಗಲೆಂದು ಮನಸಾರೆ ಆಶಿಸುತ್ತೇನೆ. ಕರ್ನಾಟಕ ವಿಶ್ವವಿದ್ಯಾಲಯದವರು ಇದರ ಪ್ರಕಟನೆಗೆ ಮುಂದೆ ಬಂದಿರುವುದು ಅಭಿನಂದನೀಯ.

ಕೃಷಿ ವಿಶ್ವವಿದ್ಯಾನಿಲಯ,
ಬೆಂಗಳೂರು

ಎಚ್. ಆರ್. ಅರಕೇರಿ
ಕುಲಪತಿಗಳು

ಅನುಕ್ರಮಣಿಕೆ

ಕಬ್ಬು

ಪ್ರಸ್ತಾವನೆ

ಇಂದಿನ ಪರಿಸ್ಥಿತಿಯಲ್ಲಿ ಕಬ್ಬಿನ ವಿಷಯವಾಗಿ ಮಾತಾಡುವುದೆಂದರೆ ಅಥವಾ ಹೇಳುವುದೆಂದರೆ, ಸರಿ ಎನಿಸಲಾರದು. ನಮ್ಮ ದೇಶದಲ್ಲಿ ಈಗ ಆಹಾರದ ಕೊರತೆ ಇದೆ. ಕಬ್ಬು ಬೆಳೆಸಿದರೆ ಆಹಾರ ಉತ್ಪಾದಿಸಿದಂತೆ ಆಗುವದಿಲ್ಲ. ಇಂದು "ಹಸಿರುಕ್ರಾಂತಿ" ಸಮಯದಲ್ಲಿ "ಹೈಬ್ರಿಡ್ ಬೆಳೆಗಳು" "ಹೆಚ್ಚು ಇಳುವರಿ ಕೊಡುವ ಬೆಳೆಗಳು" "ಹೆಚ್ಚು ಆಹಾರ ಬೆಳೆಯಿರಿ" ಎಂದು ಹೇಳುವಾಗ, ಕಬ್ಬಿನ ಬಗ್ಗೆ ಹೇಳಬೇಕೆಂದರೆ ಆಲೋಚನೆ ಮಾಡಬೇಕಾಗುತ್ತದೆ. ಇದೂ ಅಲ್ಲದೇ ಕಬ್ಬೇನೋ ಸಿಹಿ, ಅದರಿಂದ ಉತ್ಪಾದನೆ ಆಗುವಂತಹ ಸಕ್ಕರೆ ಅಥವಾ ಬೆಲ್ಲ ಕೂಡ ಸಿಹಿ ಪದಾರ್ಥಗಳೇ. ಆದರೆ ಕಬ್ಬಿನ ಬೆಳೆಗೆ ಬರುವ ಲಾಭ ಅಥವಾ ಅದಕ್ಕೆ ದೊರಕುವ ಬೆಲೆ, ರೈತರ ದೃಷ್ಟಿಯಲ್ಲಿ ಕಡಿಮೆಯೆನಿಸುತ್ತದೆ. ಸಕ್ಕರೆ ಕಾರಖಾನೆಯವರಿಗೂ, ಬೆಲ್ಲ ಮಾಡುವವರಿಗೂ ಅದು ಸಾಕಷ್ಟು ಲಾಭವನ್ನು ತರುತ್ತಿಲ್ಲ ಎಂಬ ಭಾವನೆ ಇದ್ದೇ ಇದೆ. ಅದರಲ್ಲಿಯೂ ಸಕ್ಕರೆ ಕಾರಖಾನೆಗಳು ತಾವು ಉತ್ಪಾದಿಸಿದ ಸಕ್ಕರೆಯಲ್ಲಿ ಶೇಕಡಾ ೬೫ರಷ್ಟು ಭಾಗವನ್ನು ಸರಕಾರದ ಆಜ್ಞೆಯ ಮೇರೆಗೆ ನಿಶ್ಚಿತಪಡಿಸಿದ ಕ್ರಯದಲ್ಲಿ ಸರಕಾರಕ್ಕೆ ಕೊಡಬೇಕಾಗುತ್ತದೆ. ಉಳಿದ ೩೫ರಷ್ಟು ಭಾಗದಲ್ಲಿ

ತಮ್ಮ ಲಾಭವನ್ನು ಮಾಡಿಕೊಳ್ಳಬೇಕಾಗುತ್ತದೆ. ಹೀಗಾಗಿ ಅವರಿಗೂ ಕಹಿ ಆಗಿದೆ. ಇನ್ನು ಸಕ್ಕರೆಯನ್ನು ಬಳಸುವವರಿಗಂತೂ ಅಧಿಕ ಬೆಲೆ ಕೊಟ್ಟು ಕೊಳ್ಳುವಾಗ ಆದರ ರುಚಿ ಕಹಿ ಆಗುವದು ಸಹಜವೇ. ಹೀಗೆಲ್ಲ ಪರಿಸ್ಥಿತಿ ಇದ್ದರೂ ಕಬ್ಬು ತನ್ನ ಸ್ಥಾನವನ್ನು ಕಳೆದುಕೊಂಡಿಲ್ಲ ಮತ್ತು ಬಿಟ್ಟುಕೊಡುವದೂ ಇಲ್ಲ ಎಂದು ಹೇಳಬಹುದು.

ಈ ಮೊದಲು ಹೇಳಿದವುಗಳನ್ನು ಒಂದೊಂದಾಗಿ ತೆಗೆದುಕೊಳ್ಳೋಣ : ಆಹಾರ — ನಮ್ಮ ದಿನನಿತ್ಯದ ಬಳಕೆಯಲ್ಲಿ ಉಪ್ಪು, ಮೆಣಸು, ಹುಳಿ ಇವುಗಳು ಮುಖ್ಯ ಆಹಾರದೊಂದಿಗೆ ಹೇಗೆ ಸೇರಿಕೊಂಡಿವೆಯೋ ಹಾಗೆಯೇ ಸಕ್ಕರೆ ಮತ್ತು ಬೆಲ್ಲಗಳು ಸೇರಿಕೊಂಡಿವೆ. ಅವುಗಳಿಲ್ಲದೇ ದಿನ ಕಳೆಯುವುದು ಕಠಿಣವೆನಿಸುತ್ತದೆ. ಹೀಗಾಗಿ ಕಬ್ಬನ್ನು ಆಹಾರ ಧಾನ್ಯದ ಬೆಳೆಗಳಲ್ಲಿ ಸೇರಿಸಲು ಸಾಧ್ಯವಿಲ್ಲದಿದ್ದರೂ ಸಕ್ಕರೆ ಮತ್ತು ಬೆಲ್ಲ ಇವುಗಳು ನಮಗೆ ಬೇಕೇ ಬೇಕು ಎಂದು ಎನಿಸುವದರಿಂದ ಕಬ್ಬು ಅವಶ್ಯವೆಂದು ಎನಿಸುವದು ಸಹಜವೇ ಸರಿ. ಹಾಗೆಯೇ ಹೈಬ್ರಿಡ್ ಬೆಳೆಗಳನ್ನು ಈ ದೃಷ್ಟಿಯಿಂದ ನೋಡಿದರೆ ಕಬ್ಬು ಆ ಗುಂಪಿನಲ್ಲಿ ಸೇರುವುದಿಲ್ಲ ಎಂದು ಮೇಲ್ನೋಟಕ್ಕೆ ಕಾಣಬಹುದು. ಆದರೆ ಕಬ್ಬಿನಲ್ಲಿ ಹೊಸ ತಳಿಗಳನ್ನೂ, ಜಾತಿಗಳನ್ನೂ ಕಂಡುಹಿಡಿಯುವ ಸಂಕರಣ ಕಾರ್ಯವು ನಡೆದೇ ಇರುತ್ತದೆ. ಇತರ ಬೆಳೆಗಳಲ್ಲಿ ಹೈಬ್ರಿಡ್ ಇತ್ತೀಚಿನ ಕೆಲವು ವರ್ಷಗಳಲ್ಲಿ ಬಳಕೆಗೆ ಬಂದಿರುವದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ಕಬ್ಬಿನ ಬೆಳೆಯಲ್ಲಿ ಪ್ರಗತಿ ಸಾಧಿಸುವ ಕೆಲಸವು ೧೯೧೨ ರಿಂದಲೇ ಆರಂಭವಾಗಿದೆ.

ಸಂಕರಣ ಕ್ರಿಯೆ ನಡೆಸಿ ಹೊಸ ತಳಿ ಬಂದ ಮೇಲೆ ಪುನಃ ಸಂಕರಣ ಕ್ರಿಯೆ ನಡೆಸುವದು ಅಗತ್ಯವಿಲ್ಲ. ಸಸ್ಯಜನ್ಯ ಪ್ರತ್ಯುತ್ಪತ್ತಿ ಮಾಡಲು ಸಾಧ್ಯವಿದೆ. ಈ ವಿಚಾರ ರೈತರ ಗಮನಕ್ಕೆ ಬರುವುದೇ ಇಲ್ಲ. ಇದಲ್ಲದೇ ನಮ್ಮ ಹತ್ತಿರ ಬಳಕೆ-ಯಲ್ಲಿ ಇರುವ ತಳಿಗಳೆಲ್ಲ ಹೀಗೆ ಆದವುಗಳೇ.

ಇನ್ನು ಹೆಚ್ಚು ಇಳುವರಿ ಕೊಡುವ ಬೆಳೆಗಳು : ಇವುಗಳ ಮುಖ್ಯಗುಣ ಹೆಚ್ಚು ಆಹಾರಾಂಶವನ್ನು ಉಪಯೋಗಿಸಿ ಹೆಚ್ಚು ಇಳುವರಿ ಕೊಡುವುದಾಗಿದೆ. ಕಬ್ಬಿನ ಬಗ್ಗೆ ಇದು ಸಂಪೂರ್ಣ ವಾಗಿ ಸರಿ ಹೋಗುತ್ತದೆ. ನಾವು ಕೊಡಬೇಕಾದ ಸಲಹೆಮಾಡಿದ ಗೊಬ್ಬರವನ್ನು ಈ ಬೆಳೆಗೆ ಸಕಾಲದಲ್ಲಿ ಕೊಟ್ಟರೆ ೪೦ ಟನ್ ಬರುವ ಇಳುವರಿ ೮೦ ಟನ್‌ಗೆ ಏರುವದರಲ್ಲಿ ಸಂದೇಹವೇ ಇಲ್ಲ.

ಈ ರೀತಿಯಾಗಿ ಯಾವ ವಿಧದಲ್ಲಿ ನೋಡಿದರೂ ಕಬ್ಬು ಬೆಳೆಯುವುದನ್ನು ಬೇರೆಯಾಗಿ ವಿಂಗಡಿಸಲು ಸಾಧ್ಯವೇ ಇಲ್ಲ ಎಂದೆನಿಸುತ್ತದೆ. ಈ ರೀತಿ ಇದ್ದರೂ ಸಹ ಮೊದಲಿನಿಂದ ವಾಣಿಜ್ಯ ಬೆಳೆಯಾಗಿ ಎಣಿಸಲ್ಪಟ್ಟಿರುವದರಿಂದ ಈಗಲೂ ಹಾಗೆಯೇ ಮುಂದುವರಿದಿದೆ.

ಏನೇ ಇರಲಿ, ನಮಗೆ ಬೆಲ್ಲ ಮತ್ತು ಸಕ್ಕರೆ ಬೇಕಾದಲ್ಲಿ ಕಬ್ಬು ಬೇಕು. ಅವೆರಡನ್ನು ನಾವು ಬಿಡಲು ಸಿದ್ಧರಿಲ್ಲವೆಂದಾಗ ಕಬ್ಬಿನ ಅಗತ್ಯ ಸಿದ್ಧವಾದಂತಾಯಿತು. ಇದಲ್ಲದೇ ಕಬ್ಬಿನ ಬೆಲೆ ಹಾಗೂ ಲಾಭದ ವಿಷಯವಾಗಿ ಈ ಮೊದಲು ಹೇಳಿದೆ. ಇದನ್ನು ನಾವು ಒಂದು ವರ್ಷದ ಧಾರಣೆಯ ಮೇಲೆ ಮಾತಾಡುವದು ಸರಿಯಲ್ಲ. ಬೆಲೆ ಅಥವಾ ಧಾರಣೆಯಲ್ಲಿ ಹೆಚ್ಚು ಕಡಿಮೆ

ಆಗುವದು ಒಂದು ನಿಯಮ. ಯಾವ ಬೆಳೆಯ ವಿಚಾರದಲ್ಲಿಯೂ ಇದು ಹಾಗೆಯೇ. ಆದರೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾತ್ರ ನೆನಪಿಟ್ಟುಕೊಳ್ಳಬೇಕು. ಇತರ ಬೆಳೆಗಳಾದ ರಾಗಿ, ಭತ್ತ, ಮೆಣಸಿನಕಾಯಿ ಮುಂತಾದವುಗಳನ್ನು ಶೇಖರಣೆ ಮಾಡಿ ಇಟ್ಟು, ಧಾರಣೆ ಹೆಚ್ಚಾದಾಗ ಮಾರಾಟ ಮಾಡುವದು ಸಾಧ್ಯವಾಗುತ್ತದೆ. ಆದರೆ ಕಬ್ಬಿನ ವಿಷಯದಲ್ಲಿ ಮಾತ್ರ ಹಾಗಲ್ಲ. ಕಬ್ಬಿನ ಬೆಳೆ ಬಂದ ಮೇಲೆ ರೈತನು ಅದನ್ನು ಹಾಗೆಯೇ ಇಟ್ಟುಕೊಳ್ಳಲು ಸಾಧ್ಯವೇ ಇಲ್ಲ. ಬೆಲ್ಲ ಅಥವಾ ಸಕ್ಕರೆಯಾಗಿ ಮಾರ್ಪಡಿಸಲೇಬೇಕು. ಹೀಗಿರುವದರಿಂದ ಒಂದು ಯೋಜಿತ ರೀತಿಯಲ್ಲಿ ಮುಂದುವರಿಯುವದು ಅಗತ್ಯವಾಗುತ್ತದೆ. ಈ ವರ್ಷ ಒಳ್ಳೇ ಧಾರಣೆ ಇದೆ, ಹೆಚ್ಚು ಲಾಭ ಬಂತು ಎಂದು ಬೆಳೆಯ ವಿಸ್ತೀರ್ಣವನ್ನು ಹೆಚ್ಚು ಮಾಡುವವರು ನಮ್ಮಲ್ಲಿ ಬಹಳ ಜನರು. ಹೀಗೆ ಮಾಡಿದರೆ ಉತ್ಪತ್ತಿ ಅಂದರೆ ಇಳುವರಿ ಹೆಚ್ಚು ಬರುತ್ತದೆ. ಸಕ್ಕರೆ, ಬೆಲ್ಲದ ಉತ್ಪಾದನೆ ಹೆಚ್ಚಾಗುತ್ತದೆ; ಧಾರಣೆ ತನ್ನಿಂದ ತಾನೇ ಇಳಿಯುತ್ತದೆ. ನಂತರ ಕಬ್ಬಿನ ಬೆಳೆಯ ಕ್ಷೇತ್ರವನ್ನು ಕಡಿಮೆ ಮಾಡಿದರೆ ಧಾರಣೆ ಏರಿಕೆಯಾಗುವದು. ಇದು ಒಂದು ವಿಷ ವರ್ತುಲ. ಒಂದು ಯೋಜನೆ ಹಾಕಿಕೊಂಡು ಅದರಂತೆ ನಡೆದರೆ ತಕ್ಕಮಟ್ಟಿಗೆ ಪರಿಹಾರಮಾಡಿಕೊಳ್ಳಲು ಸಾಧ್ಯವಿದೆ. ಈ ವಿಚಾರದಲ್ಲಿ ನಮ್ಮ ದೃಷ್ಟಿಯನ್ನು ಹೆಚ್ಚು ಇಳುವರಿ ಪಡೆಯುವಲ್ಲಿ ಕೇಂದ್ರೀಕರಿಸಿದರೆ ಹೆಚ್ಚಿನ ಮಟ್ಟಿಗೆ ಸಹಾಯವಾದೀತು ಹೊರತು ಹೆಚ್ಚು ವಿಸ್ತೀರ್ಣದಲ್ಲಿ, ಕಬ್ಬು ಬೆಳೆಯುವದರಲ್ಲಿ ಅಲ್ಲ. ಈ ಬೆಳೆಯಲ್ಲಿ ಅದೊಂದು ವಿಶೇಷ ಗುಣ ಇದ್ದೇ ಇದೆ. ಈ ರೀತಿ ಮಾಡುವುದರಿಂದ ಒಂದು

ಮಟ್ಟದಲ್ಲಿ ನಾವು ಸ್ಥಿರತೆಯನ್ನು ಕಂಡುಕೊಂಡಂತೆಯೂ ಆಗುತ್ತದೆ.

ಹಿನ್ನೆಲೆ

ಇನ್ನು ಈ ಬೆಳೆಯ ಹಿನ್ನೆಲೆಯನ್ನು ನೋಡೋಣ. ನಮ್ಮ ದೇಶದಲ್ಲಿ ಈ ಬೆಳೆಯನ್ನು ಬಹಳ ಪುರಾತನ ಕಾಲದಿಂದಲೂ ಬೆಳೆಯುತ್ತ ಬಂದಿದ್ದಾರೆ. ಕೆಲವೊಂದು ಆಧಾರಗಳ ಮೇಲೆ "ನ್ಯೂಗಿನಿ"ಯು ಈ ಬೆಳೆಯ ಉಗಮ ಎಂದು ತಿಳಿದವರು ಹೇಳುತ್ತಾರೆ. ಪೌರಾಣಿಕ ವಿಚಾರಗಳ ಆಧಾರದ ಮೇಲೆ ಹೇಳುವುದಾದರೆ, ಇದು ವಿಶ್ವಾಮಿತ್ರ ಸೃಷ್ಟಿ. ವಿಶ್ವಾಮಿತ್ರನು ತ್ರಿಶಂಕುವನ್ನು ಸ್ವರ್ಗಕ್ಕೆ ದೇಹ ಸಮೇತ ಕಳುಹಿಸಿ ಅಲ್ಲಿಂದ ಅವನು ಹೊರತಳ್ಳಲ್ಪಟ್ಟು ಕೆಳಕ್ಕೆ ಬೀಳುವಾಗ ಅವನನ್ನು ಅರ್ಧದಲ್ಲಿಯೇ ನಿಲ್ಲಿಸಿ ಅವನಿಗೋಸ್ಕರ ಒಂದು ವಿಶೇಷ ಸ್ವರ್ಗವನ್ನೇ ಉಂಟುಮಾಡಿ ಅಲ್ಲಿ ಸ್ವರ್ಗದಲ್ಲಿರುವ ಹಾಗೆಯೇ ಪುನಃ ಎಲ್ಲವನ್ನೂ ಸೃಷ್ಟಿಮಾಡಿದಾಗ ಅದರಲ್ಲಿ ಕಬ್ಬಿನ ಸೃಷ್ಟಿಯಾಯಿತೆಂದು ಒಂದು ಹೇಳಿಕೆ. ಬಹುಶಃ ಆ ಸಮಯದಲ್ಲಿ ಒಂದು ತುಂಡು ನಮ್ಮ ದೇಶದಲ್ಲಿಯೂ ಬಿದ್ದು, ಅದೇ ಮುಂದೆ ಬೆಳವಣಿಗೆಯಾಗಿರಬೇಕು ಎಂದು ಒಂದು ನಂಬಿಕೆ. ಏನೇ ಇರಲಿ ಈ ಬೆಳೆಯ ಚರಿತ್ರೆ ನಮ್ಮ ದೇಶದ ಚರಿತ್ರೆಯಷ್ಟೇ ಹಿಂದಿನದು ಎನ್ನುವದರಲ್ಲಿ ಸಂದೇಹವೇ ಇಲ್ಲ. ಇನ್ನೊಂದು ವಿಚಾರವೆಂದರೆ ಈ ಬೆಳೆಯ ಬೇಸಾಯವು ನಮ್ಮ ದೇಶದವರಿಗೆ ಕ್ರಿ. ಶ. ಆರಂಭವಾಗುವ ಹಲವಾರು ವರ್ಷಗಳ ಮುನ್ನವೇ ತಿಳಿದಿತ್ತು. ಭಾರತೀಯ ಭಾಷೆಗಳಲ್ಲಿ ಸಕ್ಕರೆ ಅರ್ಥ

ಕೊಡುವ ಶರ್ಕರ ಎಂಬ ಶಬ್ದ ಸಂಸ್ಕೃತದಿಂದ ಬಂದುದು. ಋಗ್ವೇದದಲ್ಲಿಯೂ ಇದರ ಪ್ರಸ್ತಾಪವಿದೆ. ಹೀಗೆಂದು ಹೇಳಿ ಬೈಬಲ್ ಮತ್ತು ಕುರಾನಗಳಲ್ಲಿ ಇದರ ಬಗ್ಗೆ ಏನೂ ಪ್ರಸ್ತಾಪ ವಿಲ್ಲ.

ಪರಿಸ್ಥಿತಿ ಹೀಗಿದ್ದರೂ ಸಹ ೧೯೦೦ ಇಸ್ವಿಯ ವರೆಗೆ ಹೆಚ್ಚಿನ ಸುಧಾರಣೆ ಏನೂ ಆಗಲಿಲ್ಲ. ಆ ಸಮಯದಲ್ಲಿ ಉತ್ತರ ಹಿಂದುಸ್ತಾನದಲ್ಲಿ ನೀಲಿ (Indigo Dye) ಬೆಳೆಯ ಮೇಲೆ ಕೃತಕ ಅಥವಾ Synthetic Indigo ಬರುವಿಕೆಯಿಂದಾಗಿ ಬಹಳ ಹೊಡೆತ ಬಿತ್ತು. ಹೆಚ್ಚಾಗಿ ಈ ಬೆಳೆಯನ್ನು ಬೆಳೆಯುತ್ತಿದ್ದ ರೈತರಿಗೆ ಅವರ ಜೀವನಾಧಾರಕ್ಕಾಗಿ ಕಬ್ಬಿನ ಬೆಳೆಯನ್ನು ಬೆಳೆಯಲು ಸೂಚಿಸಲಾಯಿತು. ಯಾಕೆಂದರೆ ಅಂತಹ ಮಣ್ಣಿನಲ್ಲಿ ಮತ್ತು ಪರಿಸ್ಥಿತಿಯಲ್ಲಿ ಕಬ್ಬಿನ ಬೆಳೆಯನ್ನು ಮಾತ್ರ ಬೆಳೆಯಲು ಸಾಧ್ಯವಾಗುತ್ತಿತ್ತು. ಹೀಗಾಗಿ ಕಬ್ಬಿನ ಬೆಳೆ ಹೆಚ್ಚಾಗಲು ಪ್ರಾರಂಭವಾಯಿತು. ಈ ರೀತಿ ಆದ ಮೇಲೆ ಅಂತಹ ರೈತರ ಸಂರಕ್ಷಣೆಗಾಗಿ ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದ ಸಕ್ಕರೆಯ ಆಮದನ್ನು ಕೂಡಲೇ ನಿಲ್ಲಿಸಬೇಕಾಯಿತು. ಅದಕ್ಕಿಂತ ಮುಂಚೆ ೧೯೨೮ ರಲ್ಲಿ ಸಕ್ಕರೆ ಕಮಿಟಿಯವರ ವರದಿ ಈ ಒಂದು ಕೈಗಾರಿಕೆಗೆ ಬುನಾದಿ ಆಯಿತು. ೧೯೩೨ ರಲ್ಲಿಯೇ ಸಂಪೂರ್ಣವಾಗಿ ಬೇಕಾದ ಸವಲತ್ತುಗಳನ್ನು ಸರಕಾರ ಕೊಟ್ಟಿತು. ಇದಕ್ಕೆ ಸರಿಯಾಗಿ ೧೯೨೮ ರಲ್ಲಿ ಹೊಸ ಸುಧಾರಿಸಿದ ತಳಿಗಳು ಬಳಕೆಗೆ ಬಂದವು. ಇವುಗಳು ಆಗ ಬಳಕೆಯಲ್ಲಿದ್ದ ಜಾತಿಗಳಿಗಿಂತ ೫೦% ರಷ್ಟು ಹೆಚ್ಚು ಇಳುವರಿಯನ್ನು ಕೊಟ್ಟವು. ಹೀಗೆ ಎಲ್ಲ

ರೀತಿಯಿಂದಲೂ ಪ್ರೋತ್ಸಾಹ ದೊರಕಿದ್ದುದರಿಂದ ಸಕ್ಕರೆ ಕಾರಖಾನೆಗಳ ಸಂಖ್ಯೆಯೂ ಹೆಚ್ಚಾಯಿತು. ೧೯೩೨ ಕ್ಕೂ ಮುಂಚೆ ಕೇವಲ ೩೨ ಕಾರಖಾನೆಗಳಿದ್ದರೂ ಈಗ ೨೦೦ ಕ್ಕೂ ಮೇಲ್ಪಟ್ಟು ಆಗಿವೆ. ಹಾಗೆಯೇ ಕಬ್ಬಿನ ಬೆಳೆಯ ವಿಸ್ತೀರ್ಣವೂ ಎರಡರಿಂದ ಮೂರರಷ್ಟು ಹೆಚ್ಚಾಗಿದೆ. ೪೦ ಲಕ್ಷ ಟನ್‌ಗಳಿಗೂ ಹೆಚ್ಚು ಸಕ್ಕರೆಯನ್ನು ಉತ್ಪಾದಿಸುತ್ತವೆ. ಹಾಗೆಯೇ ಆಮದು ಮಾಡಿಕೊಳ್ಳುತ್ತಿದ್ದ ನಮ್ಮ ದೇಶ ಈಗ ರಫ್ತು ಮಾಡಿ ವಿದೇಶಿ ವಿನಿಮಯವನ್ನು ಗಳಿಸಿಕೊಳ್ಳುವದಾಗಿದೆ.

ಈ ರೀತಿಯ ಹಿನ್ನೆಲೆ ಇದ್ದರೂ ಸಹ ಕಬ್ಬಿನ ಇಳುವರಿಯಲ್ಲಿ ಮಾತ್ರ ಗಣನೀಯ ಬೆಳವಣಿಗೆ ಕಂಡುಬಂದಿಲ್ಲ. ೧೯೨೦ ರಿಂದ ೧೯೩೦ ರ ವರೆಗೆ ಎಕರೆಗೆ ೭ ಟನ್‌ಗಳಷ್ಟಿತ್ತು. ಆಮೇಲೆ (ನಾಟಿ ಜಾತಿಗಳು) ೧೦–೧೨ ಟನ್ ಹೊಸ ತಳಿಗಳಿದ್ದದ್ದು ಈಗ ೧೯–೨೦ ಟನ್‌ಗಳಿಗೆ ಏರಿದೆ. ಇದು ಅಖಿಲಭಾರತದ ಸರಾಸರಿ. ಈ ರೀತಿ ಇರುವದರಿಂದ ಈ ಬೆಳೆಯ ವಿಚಾರದಲ್ಲಿ ನಮ್ಮ ದೃಷ್ಟಿ ಇಳುವರಿಯನ್ನು ಹೆಚ್ಚಿಸುವದರ ಕಡೆಗೆ ಇರಬೇಕಾಗುತ್ತದೆ. ದೇಶದ ಪರಿಸ್ಥಿತಿ ಹೀಗಿದ್ದಾಗ ನಮ್ಮ ರಾಜ್ಯವಾದ ಕರ್ನಾಟಕದ ಪರಿಸ್ಥಿತಿ ನೋಡೋಣ. ಇಡೀ ದೇಶದ ಸರಾಸರಿ ಇಳುವರಿಯಾದ ೧೮–೧೯ ಟನ್ನನ್ನು ನೋಡಿದಾಗ ಮೊದಲಿನಿಂದಲೂ ನಾವು ಹೆಚ್ಚು ಬೆಳೆಸುವವರು. ಇವತ್ತಿನ ಸರಾಸರಿ ಎಕರೆಗೆ ೩೬–೩೭ ಟನ್ ಇದೆ, ಅದೂ ಕೂಡ ಇತ್ತೀಚಿನ ೫ ವರ್ಷಗಳಲ್ಲಿ. ಹಿಂದೆ ೨೦–೨೫ ಟನ್ನಿನಷ್ಟಿತ್ತು. ಆದರೆ ಸ್ಪರ್ಧಾ ತಾಕುಗಳಲ್ಲಿ ಬಂದ ಇಳುವರಿ ನೋಡಿದರೆ ೧೦೦–೧೫೦,

೧೬೦ ಟನ್‌ಗಳಷ್ಟು ಬಂದದ್ದು ಇದೆ. ಇದು ಏನನ್ನು ತೋರಿಸುತ್ತದೆ ಎಂದರೆ — ಇಳುವರಿಯನ್ನು ಹೆಚ್ಚಿಸುವ ಸಾಧ್ಯತೆ ನಮ್ಮಲ್ಲಿ ವಿಪುಲವಾಗಿ ಇದೆ. ಅಖಿಲ ಭಾರತ ಮಟ್ಟದಲ್ಲಿಯೂ ಪರಿಸ್ಥಿತಿ ಹೀಗೆಯೇ ಇದೆ. ೧೯–೨೦ ಟನ್ ಇದ್ದದ್ದನ್ನು ೨೮–೩೦ ಟನ್‌ಗಳಿಗೆ ಏನೊಂದು ತೊಂದರೆ ಇಲ್ಲದೆಯೇ ಏರಿಸಲು ಸಾಧ್ಯತೆ ಇದೆ. ಅದಕ್ಕೆ ಮುಖ್ಯವಾಗಿ ಮನಸ್ಸು ಮಾಡಬೇಕು.

ಕರ್ನಾಟಕ ರಾಜ್ಯವು ಕಬ್ಬು ಬೆಳೆಯಲು ಅತಿ ಯೋಗ್ಯವಾದ ರಾಜ್ಯ. ಇಲ್ಲಿನ ಮಣ್ಣು, ಹವೆ, ನೀರು ಈ ಬೆಳೆಗೆ ಎಲ್ಲ ರೀತಿಯಿಂದಲೂ ಯೋಗ್ಯವಾಗಿದೆ. ಸಕ್ಕರೆಯ ಉತ್ಪಾದನೆಯಲ್ಲಿ ಈ ರಾಜ್ಯವು ಭಾರತದಲ್ಲಿ ೫ ನೆಯ ಸ್ಥಾನವನ್ನೂ, ಸರಾಸರಿ ಇಳುವರಿಯಲ್ಲಿ ೧ ನೆಯ ಸ್ಥಾನವನ್ನೂ "ರಿಕವರಿ" (ಕಬ್ಬಿನಲ್ಲಿರುವ ಸಕ್ಕರೆ ಅಂಶ) ಯಲ್ಲಿ ೨ ನೆಯ ಸ್ಥಾನವನ್ನೂ ಹೊಂದಿರುತ್ತದೆ. ನಮ್ಮ ರಾಜ್ಯದಲ್ಲಿ ಸದ್ಯಕ್ಕೆ ೧೭ ಸಕ್ಕರೆ ಕಾರಖಾನೆಗಳಿವೆ. ೨ ರಿಂದ ೩.೨೫ ಲಕ್ಷ ಟನ್ ಸಕ್ಕರೆ ಉತ್ಪಾದಿಸುತ್ತವೆ. ಇನ್ನು ೬ ರಿಂದ ೭ ಕಾರಖಾನೆಗಳು ಸಧ್ಯದಲ್ಲಿಯೇ ಸ್ಥಾಪನೆಯಾಗಲಿವೆ. ೮೨ ರಿಂದ ೮೫ ಲಕ್ಷ ಟನ್ ಕಬ್ಬು ಉತ್ಪಾದನೆಯಾಗುತ್ತದೆ. ೨ ರಿಂದ ೩.೫ ಲಕ್ಷ ಎಕರೆಗಳಲ್ಲಿ ಕಬ್ಬು ಬೆಳೆಯುತ್ತಾರೆ. ಸರಾಸರಿ ಇಳುವರಿ ೩೬ ರಿಂದ ೩೭ ಟನ್‌ಗಳು ಇದೆ. ಇದು ೧೯೫೬–೫೭ ರಲ್ಲಿ ೨೫ ಟನ್ನಿನಷ್ಟು ಇತ್ತು. ಉತ್ಪಾದನೆಯಾದ ೮೨ ರಿಂದ ೮೫ ಲಕ್ಷ ಟನ್ ಕಬ್ಬಿನಲ್ಲಿ ಕೇವಲ ೨೫,೦೦೦ ರಿಂದ ೨೭,೦೦೦ ಟನ್ನಿನಷ್ಟು ಕಬ್ಬು

ಮಾತ್ರ ಸಕ್ಕರೆ ಕಾರಖಾನೆಗಳಿಂದ ಉಪಯೋಗಿಸಲ್ಪಡುತ್ತದೆ. ಉಳಿದದ್ದರಲ್ಲಿ ಶೇಕಡಾ ೧೦ ರಿಂದ ೧೨ ರಷ್ಟು ಬೀಜಕ್ಕೋಸ್ಕರ ವಾಗಿಯೂ ಉಳಿದ ೬೦ ರಿಂದ ೭೦ ಭಾಗ ಬೆಲ್ಲ ತಯಾರಿಕೆಗೂ ಉಪಯೋಗಿಸಲ್ಪಡುತ್ತವೆ. ಬೆಲ್ಲ ಮಾಡುವದಕ್ಕಿಂತಲೂ ಸಕ್ಕರೆಮಾಡುವದರಲ್ಲಿ ಹೆಚ್ಚು ಉಪಯೋಗವಾಗುತ್ತದೆ. ಯಾಕೆಂದರೆ, ಬೆಲ್ಲಮಾಡುವಾಗ ಹೆಚ್ಚಿನ ಅಂಶ ನಾಶವಾಗಿ ಹೋಗುತ್ತದೆ. ರಿಕವರಿ ಅಂದರೆ ಸಕ್ಕರೆಯಾಗುವುದರ ಅಂಶ ಹೆಚ್ಚಾಗುವದು ಸಕ್ಕರೆ ಮಾಡುವದರಿಂದಲೇ. ಉದಾಹರಣೆಗೆ ಹೇಳುವದಾದರೆ ೧ ಟನ್ ಕಬ್ಬಿನಿಂದ ೯೦ ರಿಂದ ೧೦೦ ಕಿ.ಗ್ರಾಂ. ಬೆಲ್ಲ ಮಾತ್ರ ಸಿಗಬಹುದು; ಖಂಡಸಾರಿ ಸಕ್ಕರೆ ಮಾಡಿದರೆ ಕೇವಲ ೬೦ ರಿಂದ ೭೦ ಕಿ. ಗ್ರಾಂ. ಸಿಗಬಹುದು. ಆದರೆ ಸಕ್ಕರೆಯಾದರೆ ೧೧೦ ರಿಂದ ೧೨೦ ಕಿ. ಗ್ರಾಂ. ವರೆಗೆ ಸಿಗುವದು ವಿಶೇಷವೇನಲ್ಲ. ಆದರೆ ಕೆಲವೊಂದು ಸಕ್ಕರೆ ಕಾರಖಾನೆಗಳಲ್ಲಿ ಕೂಡ ೯೫ ಕಿ. ಗ್ರಾಂ. ಸಿಗುವದೂ ಉಂಟು. ಈ ಕಾರಣ ದಿಂದಾಗಿ ಸಕ್ಕರೆ ತಯಾರಿಸುವದು ಲಾಭಕರವೆಂದೇ ಹೇಳ ಬೇಕಾಗಿದೆ. ಈ ಎಲ್ಲ ಕಾರಣದಿಂದಾಗಿ ರಾಜ್ಯಸರಕಾರ ದವರು ನಮ್ಮ ರಾಜ್ಯದಲ್ಲಿ ಇನ್ನೂ ೭ ರಿಂದ ೮ ಹೆಚ್ಚು ಸಕ್ಕರೆ ಕಾರಖಾನೆಗಳನ್ನು ಸ್ಥಾಪಿಸಬೇಕೆಂದೂ ಇದ್ದ ಸಕ್ಕರೆ ಕಾರಖಾನೆ ಗಳಲ್ಲಿ ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸುವದನ್ನು ಮಾಡುತ್ತಾ ಇದ್ದಾರೆ. ಅಂದರೆ ಶೇಕಡಾ ೫೦ ರಷ್ಟು ಉತ್ಪಾದನೆಯಾದ ಕಬ್ಬು ಅಂದರೆ ೪,೬೦,೦೦೦ ದಿಂದ ೪೮೦೦೦೦ ಟನ್ನುಗಳಾದರೂ ಸಕ್ಕರೆಯಾಗಿ ಮಾರ್ಪಾಡಾಗಲೂ ಉಪ ಯೋಗಿಸಿದಂತೆ ಆಗಬೇಕು ಎಂದು ಗುರಿ ಇಟ್ಟುಕೊಂಡಿದ್ದಾರೆ.

ಹೀಗಿರುವದರಿಂದ ನಮ್ಮೆಲ್ಲರ ಕರ್ತವ್ಯ ಕೂಡ ಆದಷ್ಟು ಕಬ್ಬನ್ನು ಬೆಲ್ಲ ಮಾಡದೇ ಸಕ್ಕರೆಯಾಗಿ ಪರಿವರ್ತಿಸಲು ಉಪಯೋಗಿಸಬೇಕಾದುದೇ ಆಗಿರುತ್ತದೆ. ವಿದೇಶಿ ಮಾರುಕಟ್ಟೆಗಳಲ್ಲಿ ಸಕ್ಕರೆಗೆ ಬಹಳಷ್ಟು ಬೇಡಿಕೆ ಇದೆ. ವಿದೇಶಿ ವಿನಿಮಯ ಗಳಿಸಲು ಒಂದು ಒಳ್ಳೆಯ ಅವಕಾಶ ದೊರಕಿದೆ. ಇದರ ಸದುಪಯೋಗ ನಾವು ಮಾಡಿಕೊಳ್ಳಲೇಬೇಕು.

ಇನ್ನು ಸಕ್ಕರೆಯ ಉತ್ಪಾದನೆಯ ವಿಚಾರ ಹೇಳುವದಾದರೆ, ಇದು ನಮ್ಮ ದೇಶದ ಕೈಗಾರಿಕೆಗಳಲ್ಲಿ ೨ನೇ ಸ್ಥಾನವನ್ನು ಹೊಂದಿರುತ್ತದೆ. ಮೊದಲನೆಯದು ಜವಳಿ (Textiles) ಕೈಗಾರಿಕೆ. ಈ ಕೈಗಾರಿಕೆಗೆ ಮೂಲವಸ್ತು ಕಬ್ಬು. ಕಬ್ಬಿನಿಂದ ಸಕ್ಕರೆ ಒಂದೇ ಅಲ್ಲ; ಅದರ ಜೊತೆಗೆ ಕಬ್ಬಿನ ಸಿಪ್ಪೆಯಿಂದ ಪೇಪರು, ಕಂಪೋಷ್ಟು, ರಸ ಬೇರ್ಪಟ್ಟ ಮೇಲೆ ಉಳಿದ ಕಬ್ಬಿನ ಸಿಪ್ಪೆ ಜಲ್ಲೆಗಳಿಂದ ಪೇಪರು, ಉರಿಯುವ ಸಾಧನ, ದನಗಳ ಆಹಾರ, activated carbon, ಶೆಲ್ಯೂಲೋಸ್, ಪ್ರೆಸ್‌ಮಡ್ ಗೊಬ್ಬರ, ಕೇನ ವೇಕ್ಸ (ಮಯಣ) ಪೊಲಿಶ್, ಚೋಕ ಅಲ್ಲದೇ ಮೊಲೆಸಸ್‌ನಿಂದ ಗೊಬ್ಬರ, ದನಗಳ ಆಹಾರ ಉರಿಯುವ ಸಾಧನ ಆಲ್ಕೊಹಾಲ್ ಮುಂತಾದವುಗಳು ನಮಗೆ ದೊರೆಯುತ್ತವೆ. ಬೆಲ್ಲ ಮಾಡಿದರೆ ಮೇಲಿನವುಗಳು ದೊರಕುವದು ಕೂಪ ಕಡಿಮೆಯಾಗುತ್ತದೆ. ಹೀಗಾಗಿ ಸಕ್ಕರೆಯ ಮಹತ್ವ ಎಷ್ಟೆಂಬುದನ್ನು ನಾವು ತಿಳಿದುಕೊಳ್ಳಬೇಕು. ಬೆಲ್ಲ ತಯಾರಿಸಿದರೆ ಹೆಚ್ಚಿನ ಇತರ ವಸ್ತು ಸಾಮುಗ್ರಿಗಳು ಸಿಗುವ ಸಾಧ್ಯತೆ ಕಡಿಮೆ; ಹೀಗಾಗಿ, ಕಬ್ಬಿನಿಂಧ ಹೆಚ್ಚು ಲಾಭ ಪಡೆಯಬೇಕಾಧರೆ ಸಕ್ಕರೆಯಾಗಿ ಪರಿವರ್ತಿಸಿದರೆ ಒಳ್ಳೆಯದು.

ಇನ್ನು ಸಕ್ಕರೆ ತಯಾರಿಕೆ ಒಂದು ಕೈಗಾರಿಕೆ ಎಂದು ಪರಿಗಣಿಸಲ್ಪಟ್ಟಿದ್ದರೂ ಮೂಲ ವಸ್ತು ಬೇಕಾದುದು ಕಬ್ಬು, ಒಂದು ವ್ಯವಸಾಯದ ಬೆಳೆ. ಎಲ್ಲರ ಅಭಿಪ್ರಾಯ ಸರ್ವಸಾಧಾರಣವಾಗಿ ಹೇಳುವುದಾದರೆ ಸಕ್ಕರೆ ಕಾರಖಾನೆಯಲ್ಲಿ ತಯಾರಾಗುತ್ತದೆ. ಯಾಕೆಂದರೆ ಕಾರಖಾನೆಗೆ ಕಬ್ಬು ಹೋದಮೇಲೆ ಸಕ್ಕರೆ ತಯಾರು ಆಗುತ್ತದೆ. ಆದರೆ ನಿಜವಾಗಿ ಹೇಳಬೇಕಾದರೆ ಅದೊಂದು ತಪ್ಪು ಅಭಿಪ್ರಾಯ. ಏಕೆಂದರೆ ಸಕ್ಕರೆ ಕಾರಖಾನೆಯಲ್ಲಿ ಸಕ್ಕರೆ ತಯಾರಾಗುವದಿಲ್ಲ. ಕಬ್ಬಿನಲ್ಲಿದ್ದ ಸಕ್ಕರೆಯನ್ನು ಬೇರ್ಪಡಿಸುವ ಕಾರ್ಯ ಅಲ್ಲಿ ನಡೆಯುತ್ತದೆ. ಸಕ್ಕರೆ ತಯಾರಾಗುವದು ಕಬ್ಬಿನಿಂದ. ಹೀಗೆ ಸಕ್ಕರೆ ತಯಾರಾಗಬೇಕಾದರೆ ಕಬ್ಬನ್ನು ಸರಿಯಾದ ರೀತಿಯಲ್ಲಿ ಬೆಳೆಸುವದು ಅಗತ್ಯ. ಸರಿಯಾದ ರೀತಿಯಲ್ಲಿ ಬೆಳೆಸಿದರೆ ಮಾತ್ರ ಹೆಚ್ಚು ಸಕ್ಕರೆ ತಯಾರಾಗಲು ಸಾಧ್ಯ. ಅಲ್ಲಿಂದ ಹೆಚ್ಚು ಸಕ್ಕರೆ ಸಿಗಲು ಸಾಧ್ಯ. ಹೀಗಿರುವದರಿಂದ ಕಬ್ಬು ಬೆಳೆಯುವವರ ಪಾತ್ರ ಸಕ್ಕರೆ ಕಾರಖಾನೆಯವರ ಪಾತ್ರಕ್ಕಿಂತಲೂ ಹೆಚ್ಚಾಗಿದೆ. ಹಾಗೆಯೇ ಸಕ್ಕರೆ ಕಾರಖಾನೆಯವರೂ ಸಹಿತ ಈ ಕಬ್ಬಿನ ಬೇಸಾಯದ ಬಗ್ಗೆ ಸರಿಯಾದ ಗಮನ ಕೊಡುವದು ಅತಿ ಅಗತ್ಯವಾಗಿದೆ.

ಮೇಲಿನ ಕಾರಣದಿಂದಾಗಿ ಕಬ್ಬು ಬೆಳೆಯುವ ರೀತಿ ಅತೀ ಮಹತ್ವದ್ದಾದ್ದರಿಂದ ಯಾವ ರೀತಿ ಬೆಳೆಯಬೇಕು ಎನ್ನುವುದನ್ನು ಇತರ ಎಲ್ಲ ಬೆಳೆಗಳಂತೆ ವರ್ಗೀಕರಣ ಮಾಡಿ ಒಂದೊಂದಾಗಿ ನೋಡೋಣ: ನಮ್ಮ ರಾಜ್ಯ ಕಬ್ಬು ಬೆಳೆಯಲು ಅತಿ ಯೋಗ್ಯವಾದ ರಾಜ್ಯ. ಇಲ್ಲಿನ ಹವಾಮಾನ, ನೀರು, ಮಣ್ಣು ಎಲ್ಲ ರೀತಿಯಿಂದಲೂ ಕಬ್ಬು ಬೆಳೆಯಲು ಯೋಗ್ಯವಾಗಿದೆ.

ಈ ರಾಜ್ಯದ ಸರಾಸರಿ ಇಳುವರಿ ೩೬ ಟನ್ನಿನಷ್ಟಿದ್ದರೂ ಸಹ ೧೨೬–೧೩೦ ಟನ್‌ಗಳಷ್ಟು ಬೆಳೆದ ಉದಾಹರಣೆಗಳಿವೆ. ಈ ರೀತಿ ಎಲ್ಲರೂ ಕಬ್ಬನ್ನು ಬೆಳೆಯಲು ಸಾಧ್ಯವಿರದಿದ್ದರೂ ಹೆಚ್ಚು ಬೆಳೆಯನ್ನು ತೆಗೆಯುವ ಸಾಧ್ಯತೆ ಇದ್ದೇ ಇದೆ. ಏಕೆಂದರೆ ಸ್ಪರ್ಧಾ ತಾಕುಗಳ ಇಳುವರಿಯನ್ನು ನೋಡಿದರೆ ೬೦, ೭೦, ೮೦ ಟನ್‌ಗಳಷ್ಟು ಬೆಳೆದ ರೈತರು ಬಹಳಷ್ಟು ಇದ್ದೇ ಇದ್ದಾರೆ. ಹೀಗಾದುದರಿಂದ ಎಲ್ಲವೂ ಸರಿಯಾಗಿರುವಾಗ ಹೆಚ್ಚು ಇಳುವರಿ ತೆಗೆಯುವದು ನಮ್ಮ ಕರ್ತವ್ಯವೇ ಆಗಿರುತ್ತದೆ. ಮತ್ತು ಸಾಧ್ಯವೂ ಇದೆ. ಆದರೆ ಮನಸ್ಸು ಮಾತ್ರ ಮುಖ್ಯವಾಗಿ ಬೇಕಾಗುತ್ತದೆ.

ಮಣ್ಣು :

ಕಬ್ಬನ್ನು ಎಲ್ಲ ತರಹದ ಮಣ್ಣುಗಳಲ್ಲಿಯೂ ಬೆಳೆಯಬಹುದು. ಆದರೆ ಹೆಚ್ಚಿನ ಇಳುವರಿ ಬರಬೇಕಾದರೆ ಮಧ್ಯಮ ತರಗತಿಯ ಕಪ್ಪು ಮಣ್ಣು (Medium Black Soils) ಮೆಕ್ಕಲು ಮಣ್ಣು ಅತಿ ಯೋಗ್ಯವಾದಂತಹದು. ಇದರಲ್ಲಿಯೂ ಇರಬೇಕಾದ ಗುಣವೆಂದರೆ ಉತ್ತಮವಾಗಿ ನೀರು ಬಸಿದು ಹೋಗುವ ವ್ಯವಸ್ಥೆ ಇರಬೇಕು. ಮಣ್ಣಿನ ಆಳ ೩ ರಿಂದ ೪ ಅಡಿಗಳ ವರೆಗೆ ಇರಬಹುದು. ಕ್ಷಾರಯುಕ್ತ ಮಣ್ಣು ಈ ಬೆಳೆಗೆ ಯೋಗ್ಯವಲ್ಲ. ಹನ್ನೆರಡು ತಿಂಗಳ ಬೆಳೆಯಾಗಿ ಹನ್ನೊಂದು ಹನ್ನೊಂದುವರೆ ತಿಂಗಳು ನೀರು ಬೇಕಾದರೂ ಸಹ ಈ ಬೆಳೆಯಲ್ಲಿ ನೀರು ನಿಂತರೆ ಅದು ತಡಕೊಳ್ಳುವದಿಲ್ಲ. ಹೀಗಾದುದರಿಂದ ಅಂತಹ ಜಮೀನುಗಳನ್ನು ಬಿಡುವದು ಒಳ್ಳೆಯದು. ಮಾಡಲೇಬೇಕಾದ ಪ್ರಸಂಗದಲ್ಲಿ ಹೆಚ್ಚು ನೀರು

ಬಸಿದು ಹೋಗುವಂತೆ ವ್ಯವಸ್ಥೆ ಮಾಡಿ ಆ ಮೇಲೆ ಕಬ್ಬು ಬೆಳೆಯುವದು ಅಗತ್ಯ. ಕಪ್ಪು ಮಣ್ಣಾದರೆ ಸರಿಯಾಗಿ ಕೆಂಪು ಮಣ್ಣು ಕರೇಗೋಡು ಮುಂತಾದವುಗಳನ್ನು ಸೇರಿಸಿ ಉತ್ತಮ ಪಡಿಸಿ ಆಮೇಲೆ ಕಬ್ಬು ನೆಡುವ ಕಾರ್ಯಕ್ರಮ ತೆಗೆದುಕೊಳ್ಳುವದು ಒಳ್ಳೆಯದು. ಹಾಗೆಯೇ ಮರಳು ಮಣ್ಣಿದ್ದರೂ ಸಹ ಅದನ್ನು ಮೇಲ್ಕಂಡ ರೀತಿಯಲ್ಲಿ ಸರಿಪಡಿಸಿ ಆಮೇಲೆ ಬೆಳೆಯಲು ಉಪಯೋಗಿಸಕ್ಕದ್ದು. ಮತ್ತು ಕ್ಷಾರ ಹಾಗೂ ಲವಣಯುಕ್ತ ಮಣ್ಣುಗಳಿದ್ದರೂ ಸಹ ನೀರು ಬಸಿದು ಹೋಗುವದಕ್ಕೆ ಅನುಕೂಲತೆ ಏರ್ಪಡಿಸಿದಲ್ಲಿ ಕಬ್ಬು ಬೆಳೆಯಲು ಸಹಾಯ ವಾಗುವದು.

ಹವಾಗುಣ:

ಇದು ಉಷ್ಣವಲಯದ ಬೆಳೆ. ಇದರ ಒಂದು ವಿಶೇಷವೆಂದರೆ ವರ್ಷದ ಯಾವ ಕಾಲದಲ್ಲಿಯೂ ಇದನ್ನು ಬೆಳೆಯಬಹುದು. ಆದರೆ ಉಷ್ಣಾಂಶ ೫೦°C ಗಿಂತ ಹೆಚ್ಚಿದರೆ ಬೆಳವಣಿಗೆ ನಿಂತು ಹೋಗುತ್ತದೆ. ಹಾಗೆಯೇ ೨೦°C ಕ್ಕಿಂತ ಕಡಿಮೆಯಾದಲ್ಲಿ ಕೂಡ ಬೆಳವಣಿಗೆ ಕಡಿಮೆಯಾಗುತ್ತದೆ. ಪರಿಸ್ಥಿತಿ ಹೀಗಿರುವದರಿಂದಲೇ ಉತ್ತರ ಭಾರತದಲ್ಲಿ ಕಬ್ಬಿನ ಬೆಳವಣಿಗೆ ಅಷ್ಟೊಂದು ಚೆನ್ನಾಗಿರುವದಿಲ್ಲ. ಬೆಳವಣಿಗೆಗೆ ಸಿಗುವ ಸಮಯ ಕೂಡ ಕೇವಲ ೩ ರಿಂದ ೪ ತಿಂಗಳು ಆಗಿರುತ್ತದೆ. ಹೀಗಾಗಿ ಇಳುವರಿ ಕಡಿಮೆಯಾಗುತ್ತದೆ. ಇನ್ನೊಂದು ಮುಖ್ಯ ವಿಚಾರವೆಂದರೆ ಸಮುದ್ರ ತೀರದ ಆರ್ದ್ರ ಹವೆ ಕೂಡ ಈ ಬೆಳೆಗೆ ಅಷ್ಟೊಂದು ಸಮಂಜಸವಲ್ಲ. ಈ ವಾತಾವರಣದಲ್ಲಿ ಬೆಳೆದ ಕಬ್ಬಿನಿಂದ ತಯಾರಿಸಿದ ಬೆಲ್ಲ ಗಟ್ಟಿಯಾಗಿರುವದಿಲ್ಲ.

ಈ ರಾಜ್ಯದ ಸರಾಸರಿ ಇಳುವರಿ ೩೬ ಟನ್ನಿನಷ್ಟಿದ್ದರೂ ಸಹ ೧೨೬-೧೩೦ ಟನ್‌ಗಳಷ್ಟು ಬೆಳೆದ ಉದಾಹರಣೆಗಳಿವೆ. ಈ ರೀತಿ ಎಲ್ಲರೂ ಕಬ್ಬನ್ನು ಬೆಳೆಯಲು ಸಾಧ್ಯವಿರದಿದ್ದರೂ ಹೆಚ್ಚು ಬೆಳೆಯನ್ನು ತೆಗೆಯುವ ಸಾಧ್ಯತೆ ಇದ್ದೇ ಇದೆ. ಏಕೆಂದರೆ ಸ್ಪರ್ಧಾ ತಾಕುಗಳ ಇಳುವರಿಯನ್ನು ನೋಡಿದರೆ ೬೦, ೭೦, ೮೦ ಟನ್‌ಗಳಷ್ಟು ಬೆಳೆದ ರೈತರು ಬಹಳಷ್ಟು ಇದ್ದೇ ಇದ್ದಾರೆ. ಹೀಗಾದುದರಿಂದ ಎಲ್ಲವೂ ಸರಿಯಾಗಿರುವಾಗ ಹೆಚ್ಚು ಇಳುವರಿ ತೆಗೆಯುವದು ನಮ್ಮ ಕರ್ತವ್ಯವೇ ಆಗಿರುತ್ತದೆ. ಮತ್ತು ಸಾಧ್ಯವೂ ಇದೆ. ಆದರೆ ಮನಸ್ಸು ಮಾತ್ರ ಮುಖ್ಯವಾಗಿ ಬೇಕಾಗುತ್ತದೆ.

ಮಣ್ಣು :

ಕಬ್ಬನ್ನು ಎಲ್ಲ ತರಹದ ಮಣ್ಣುಗಳಲ್ಲಿಯೂ ಬೆಳೆಯಬಹುದು. ಆದರೆ ಹೆಚ್ಚಿನ ಇಳುವರಿ ಬರಬೇಕಾದರೆ ಮಧ್ಯಮ ತರಗತಿಯ ಕಪ್ಪು ಮಣ್ಣು (Medium Black Soils) ಮೆಕ್ಕಲು ಮಣ್ಣು ಅತಿ ಯೋಗ್ಯವಾದಂತಹದು. ಇದರಲ್ಲಿಯೂ ಇರಬೇಕಾದ ಗುಣವೆಂದರೆ ಉತ್ತಮವಾಗಿ ನೀರು ಬಸಿದು ಹೋಗುವ ವ್ಯವಸ್ಥೆ ಇರಬೇಕು. ಮಣ್ಣಿನ ಆಳ ೩ ರಿಂದ ೪ ಅಡಿಗಳ ವರೆಗೆ ಇರಬಹುದು. ಕ್ಷಾರಯುಕ್ತ ಮಣ್ಣು ಈ ಬೆಳೆಗೆ ಯೋಗ್ಯವಲ್ಲ. ಹನ್ನೆರಡು ತಿಂಗಳ ಬೆಳೆಯಾಗಿ ಹನ್ನೊಂದು ಹನ್ನೊಂದುವರೆ ತಿಂಗಳು ನೀರು ಬೇಕಾದರೂ ಸಹ ಈ ಬೆಳೆಯಲ್ಲಿ ನೀರು ನಿಂತರೆ ಅದು ತಡಕೊಳ್ಳುವದಿಲ್ಲ. ಹೀಗಾದುದರಿಂದ ಅಂತಹ ಜಮೀನುಗಳನ್ನು ಬಿಡುವದು ಒಳ್ಳೆಯದು. ಮಾಡಲೇಬೇಕಾದ ಪ್ರಸಂಗದಲ್ಲಿ ಹೆಚ್ಚು ನೀರು

ಬಸಿದು ಹೋಗುವಂತೆ ವ್ಯವಸ್ಥೆ ಮಾಡಿ ಆ ಮೇಲೆ ಕಬ್ಬು ಬೆಳೆಯುವದು ಅಗತ್ಯ. ಕಪ್ಪು ಮಣ್ಣಾದರೆ ಸರಿಯಾಗಿ ಕೆಂಪು ಮಣ್ಣು ಕರೇಗೋಡು ಮುಂತಾದವುಗಳನ್ನು ಸೇರಿಸಿ ಉತ್ತಮ ಪಡಿಸಿ ಆಮೇಲೆ ಕಬ್ಬು ನೆಡುವ ಕಾರ್ಯಕ್ರಮ ತೆಗೆದುಕೊಳ್ಳುವದು ಒಳ್ಳೆಯದು. ಹಾಗೆಯೇ ಮರಳು ಮಣ್ಣಿದ್ದರೂ ಸಹ ಅದನ್ನು ಮೇಲ್ಕಂಡ ರೀತಿಯಲ್ಲಿ ಸರಿಪಡಿಸಿ ಆಮೇಲೆ ಬೆಳೆಯಲು ಉಪಯೋಗಿಸಕ್ಕದ್ದು. ಮತ್ತು ಕ್ಷಾರ ಹಾಗೂ ಲವಣಯುಕ್ತ ಮಣ್ಣುಗಳಿದ್ದರೂ ಸಹ ನೀರು ಬಸಿದು ಹೋಗುವದಕ್ಕೆ ಅನುಕೂಲತೆ ಏರ್ಪಡಿಸಿದಲ್ಲಿ ಕಬ್ಬು ಬೆಳೆಯಲು ಸಹಾಯವಾಗುವದು.

ಹವಾಗುಣ :

ಇದು ಉಷ್ಣವಲಯದ ಬೆಳೆ. ಇದರ ಒಂದು ವಿಶೇಷವೆಂದರೆ ವರ್ಷದ ಯಾವ ಕಾಲದಲ್ಲಿಯೂ ಇದನ್ನು ಬೆಳೆಯಬಹುದು. ಆದರೆ ಉಷ್ಣಾಂಶ ೫೦°C ಗಿಂತ ಹೆಚ್ಚಿದರೆ ಬೆಳವಣಿಗೆ ನಿಂತು ಹೋಗುತ್ತದೆ. ಹಾಗೆಯೇ ೨೦°C ಕ್ಕಿಂತ ಕಡಿಮೆಯಾದಲ್ಲಿ ಕೂಡ ಬೆಳವಣಿಗೆ ಕಡಿಮೆಯಾಗುತ್ತದೆ. ಪರಿಸ್ಥಿತಿ ಹೀಗಿರುವದರಿಂದಲೇ ಉತ್ತರ ಭಾರತದಲ್ಲಿ ಕಬ್ಬಿನ ಬೆಳವಣಿಗೆ ಅಷ್ಟೊಂದು ಚೆನ್ನಾಗಿರುವದಿಲ್ಲ. ಬೆಳವಣಿಗೆಗೆ ಸಿಗುವ ಸಮಯ ಕೂಡ ಕೇವಲ ೩ ರಿಂದ ೪ ತಿಂಗಳು ಆಗಿರುತ್ತದೆ. ಹೀಗಾಗಿ ಇಳುವರಿ ಕಡಿಮೆಯಾಗುತ್ತದೆ. ಇನ್ನೊಂದು ಮುಖ್ಯ ವಿಚಾರವೆಂದರೆ ಸಮುದ್ರ ತೀರದ ಆರ್ದ್ರ ಹವೆ ಕೂಡ ಈ ಬೆಳೆಗೆ ಅಷ್ಟೊಂದು ಸಮಂಜಸವಲ್ಲ. ಈ ವಾತಾವರಣದಲ್ಲಿ ಬೆಳೆದ ಕಬ್ಬಿನಿಂದ ತಯಾರಿಸಿದ ಬೆಲ್ಲ ಗಟ್ಟಿಯಾಗಿರುವದಿಲ್ಲ.

ಪ್ರಾರಂಭಿಕ ಬೇಸಾಯ :

ಯಾವ ಬೆಳೆಗಾದರೂ ಬಿತ್ತನೆ ಮಾಡುವ ಪೂರ್ವದಲ್ಲಿ ಮಣ್ಣನ್ನು ಉಳುಮೆಮಾಡಿ ಸರಿಯಾಗಿ ಹದಮಾಡಬೇಕಾದುದು ತಿಳಿದಿರುವ ವಿಷಯ. ಹೀಗಾಗಿ ಕಬ್ಬು ಬೆಳೆಯಬೇಕಾದರೂ ಕೂಡ ಪ್ರಾರಂಭಿಕಬೇಸಾಯ ಸರಿಯಾದ ರೀತಿಯಲ್ಲಿ ಆಗಬೇಕು. ಅದರಲ್ಲೂ ಇದು ೧೨ ರಿಂದ ೧೪ ತಿಂಗಳು ಇರುವ ಬೆಳೆಯಾದ್ದ ರಿಂದ ಬೇರುಗಳು ಜಮೀನಿನಲ್ಲಿ ೫ ರಿಂದ ೬ ಅಡಿ ಆಳಹೋಗುವದ ರಿಂದಲೂ ಆಳವಾದ ಉಳುಮೆ ಅತೀ ಅಗತ್ಯ. ಆಳವಾಗಿ ಉಳುಮೆ ಮಾಡದಿದ್ದರೆ ಬೇರುಗಳು ಪಸರಿಸಲು ಅಥವಾ ಹರಡಲು ತೊಂದರೆಯುಂಟಾಗುತ್ತದೆ, ಆಳವಾದ ಕಪ್ಪು ಮಣ್ಣಿನಲ್ಲಿ ಈ ರೀತಿ ಆಳ ಉಳುಮೆ ಮಾಡಿದರೆ ಬೇರುಗಳು ಆಳವಾಗಿ ಹೋಗಲು ಬಹಳ ಸಹಾಯವಾಗುತ್ತದೆ. ಮಣ್ಣು ತನ್ನಲ್ಲಿ ಮಳೆಯಿಂದಾಗಿ ಬಂದಂತಹ ನೀರು ಅಥವಾ ನೀರಾವರಿ ಯಿಂದ ಒದಗಿದಂತಹ ನೀರನ್ನು ಹಿಡಿದಿಟ್ಟುಕೊಳ್ಳುವಂತಹ ಶಕ್ತಿಯನ್ನು ಹೊಂದುವಿಕೆ, ಸಸ್ಯ ಆಹಾರಾಂಶಗಳನ್ನು ಕರಗಿಸಿ ಕೊಂಡು ತನ್ಮೂಲಕ ಬೇರುಗಳಿಗೆ ಒದಗಿಸಿ ಕೊಡುವಂತೆ ಆಗು ವದು. ಸರಿಯಾದ ರೀತಿಯಲ್ಲಿ ಗಾಳಿಯಾಡುವಿಕೆ ಮತ್ತು ಬೇರುಗಳ ಸಂಚಲನೆಗೆ ಸಹಾಯವಾಗುವದು. ಪ್ರಾರಂಭಿಕ ಬೇಸಾಯವನ್ನು ಅವಲಂಬಿಸಿರುತ್ತದೆ. ಹೀಗಾದುದರಿಂದ ಸರಿಯಾದ ರೀತಿಯಲ್ಲಿ ಮಣ್ಣನ್ನು ಹದಗೊಳಿಸುವದು ಅತಿ ಮುಖ್ಯವಾಗಿರುತ್ತದೆ.

ಹಟ್ಟಿ ಗೊಬ್ಬರ ಹಾಗೂ ಹಸಿರೆಲೆ ಗೊಬ್ಬರ:

ಕೆಲವು ಪರದೇಶಗಳಲ್ಲಿ ಕಬ್ಬಿನ ಬೆಳೆಗೆ ಹಸುರೆಲೆ ಗೊಬ್ಬರ

ವಾಗಲೀ ಹಟ್ಟಿಗೊಬ್ಬರವಾಗಲೀ ಕೊಡುವ ಅಗತ್ಯವಿಲ್ಲವೆಂಬ ಒಂದು ಭಾವನೆ ಇದೆ. ಇದಕ್ಕೂ ಕಾರಣವಿಲ್ಲದಿಲ್ಲ. ಅಂತಹ ದೇಶಗಳಲ್ಲಿ ಕಬ್ಬು ೨ ರಿಂದ ೩ ವರ್ಷ ಜಮೀನಿನಲ್ಲಿ ನಿಲ್ಲುತ್ತದೆ. ಅದರಿಂದ ಉತ್ಪತ್ತಿಯಾದ ಬೇರು, ಸೋಗೆ, ಗರಿ, ಮುಂತಾದವುಗಳೇ ಗೊಬ್ಬರವಾಗುತ್ತವೆ. ಹಾಗೆಯೇ ಅಲ್ಲಿ ಯಾಂತ್ರೀಕೃತ ಸಾಗುವಳಿ ಕೂಡ ಪ್ರಚಾರದಲ್ಲಿದ್ದು ಪ್ರಾಣಿಗಳ ಬಳಕೆ ವ್ಯವಸಾಯದಲ್ಲಿ ಬಹಳ ಕಡಿಮೆ ಇರುತ್ತದೆ. ಹೀಗಾಗಿ ಹಟ್ಟಿಗೊಬ್ಬರ ಸಿಗುವದು ಕೂಡ ದುರ್ಲಭ. ಈ ಕಾರಣದಿಂದಾಗಿ ಆ ರೀತಿಯ ಭಾವನೆ ಬಂದಿರಲು ಸಾಧ್ಯವಿರಬಹುದು. ಆದರೆ ನಮ್ಮ ದೇಶದ ಸ್ಥಿತಿ ಆ ರೀತಿ ಇಲ್ಲ. ಬೇಕಾದಷ್ಟು ಪ್ರಾಣಬಲ ನಮಗೆ ಇದ್ದೇ ಇದೆ. ಗೊಬ್ಬರ ಸಾಕಷ್ಟು ಪ್ರಮಾಣದಲ್ಲಿ ದೊರಕಲು ಸಾಧ್ಯತೆ ಇದೆ. ಅಲ್ಲದೆ ಈ ಗೊಬ್ಬರಗಳನ್ನು ಸೇರಿಸುವದರಿಂದ ಮಣ್ಣಿನ ಗುಣ ಸುಧಾರಿಸಲು ಸಾಧ್ಯವಾಗುತ್ತದೆ, ಮಣ್ಣಿನಲ್ಲಿರುವ ಸಾವಯುವ ಪದಾರ್ಥ Organic Matter) ಬೇರೆ ಬೇರೆ ಕಾರಣಗಳಿಂದ ಹೆಚ್ಚಾಗಿ ನಷ್ಟವಾಗುವದರಿಂದ ಅದರ ಕೊರತೆಯನ್ನು ನಾವು ನೀಗಿಸಲೇಬೇಕಾಗುತ್ತದೆ. ಹೀಗಾಗಿ ನಾವು ಅವೆರಡನ್ನೂ ಜಮೀನಿನಲ್ಲಿ ಸೇರಿಸುವದೇ ಸೂಕ್ತವಾಗಿರುತ್ತದೆ. ಹಾಗೆಯೇ ಏನೂ ಬೆಳೆ ಬೆಳೆಯದೇ ಕೆಲವು ಕಾಲ ಜಮೀನು ಬೀಳು ಬಿಡುವದು (Fallowing) ಒಂದು ಪದ್ಧತಿ ಇದೆ. ಹೀಗೆ ಮಾಡುವದರಿಂದ ಜಮೀನಿಗೆ ವಿಶ್ರಾಂತಿ ಕೊಟ್ಟು ತಾನು ಕಳಕೊಂಡ ಫಲವತ್ತತೆಯನ್ನು ಒಂದು ಮಟ್ಟದಲ್ಲಿ ನಿಲ್ಲಿಸಲು ಸಾಧ್ಯವೆಂಬ ವಿಚಾರ ಅದರಲ್ಲಿ ಅಡಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಹಾಗೆ ಬೀಳು ಬಿಡುವ

ದಕ್ಕಿಂತ ಬದಲು ಒಂದು ಹಸಿರೆಲೆ ಬೆಳೆಯನ್ನು ಬೆಳೆಸಿದರೆ ಮಣ್ಣಿನಲ್ಲಿನ ಸಾರಜನಕವನ್ನು ಹೆಚ್ಚಿಸಿದಂತಾಗುತ್ತದೆ. ಬೆಳೆ ಪರಿವರ್ತನೆ ಮಾಡಿದ ಹಾಗೂ ಆಗುತ್ತದೆ. ಈ ಹಸಿರೆಲೆ ಬೆಳೆಗಳಿಗೆ ಜೀವಾಣುಗಳ ಬಳಕೆ ಹಾಗೂ ರಂಜಕಾಂಶಯುಕ್ತವಾದ ಗೊಬ್ಬರಗಳನ್ನು ಕೂಡ ಕೊಟ್ಟು ಬೆಳೆಸಿದರೆ ಇನ್ನೂ ಹೆಚ್ಚಿನ ಉಪಯೋಗ ನಮಗೆ ಸಿಗುತ್ತದೆ. ಹಾಗೆ ಬೆಳೆಯಲು ಸಾಧ್ಯ ವಿರದಿದ್ದರೆ ಹೊರಗಡೆಯಿಂದ ಹಸಿರೆಲೆ ಸೊಪ್ಪನ್ನು ತಂದು ಉಪಯೋಗಿಸಬಹುದು. ಇಲ್ಲದಿದ್ದರೆ ಕಬ್ಬು ಹಾಕುವಾಗ ಈ ಹಸಿರೆಲೆ ಗೊಬ್ಬರದ ಬೀಜಗಳನ್ನು ದಿಣ್ಣೆಗಳ ಮೇಲೆ ಬಿತ್ತಿ ೪೫ ದಿನಗಳಾದ ನಂತರ ಬೆಳೆದ ಬೆಳೆಯನ್ನು ಮಣ್ಣಿನೊಳಕ್ಕೆ ಸೇರಿಸಬಹುದು. ಹಟ್ಟಿ ಗೊಬ್ಬರ ಅಥವಾ ಕಾಂಪೋಸ್ಟು ೫೦೦೦ ದಿಂದ ೧೦,೦೦೦ ಕಿ.ಗ್ರಾಂ. ಒಂದು ಎಕರೆಗೆ ಸೇರಿಸ ಬಹುದು. ಹಾಗೆ ೩೦೦೦ ದಿಂದ ೫,೦೦೦ ಕಿ.ಗ್ರಾಂ. ಹಸಿರೆಲೆ ಗೊಬ್ಬರ ಸೇರಿಸಿದರೆ ಕಾಂಪೋಸ್ಟು ಮತ್ತು ಪಟ್ಟಿ ಗೊಬ್ಬರದ ಪ್ರಮಾಣ ಕಡಿಮೆಮಾಡಲು ಸಾಧ್ಯವಿದೆ.

ಭೂಮಿಯ ತಯಾರಿಕೆ :

ಸರಿಯಾದ ರೀತಿಯಲ್ಲಿ ಮಣ್ಣು ಹದಮಾಡಬೇಕು. ಕಳೆಗಳೇನಾದರೂ ಇದ್ದಲ್ಲಿ ಕಿತ್ತಿದು ನಾಶಪಡಿಸಬೇಕು, ಜೇಡಿ ಮಣ್ಣಿನ ತರಹ ಇದ್ದಲ್ಲಿ ಆಳವಾಗಿ ಅಡ್ಡವಾಗಿ ಉಳುಮೆ ಮಾಡಿ, ನಂತರ ಹೆಂಟೆಗಳನ್ನು ಪುಡಿ ಮಾಡಬೇಕು. ಆ ಮೇಲೆ ಭೂಮಿ ಮಟ್ಟಮಾಡಿ, ಸಾಲು ಮತ್ತು ದಿಬ್ಬ ಅಥವಾ ದಿಣ್ಣೆಗಳಾಗಿ ವಿಂಗಡಿಸಬೇಕು. ಸಾಲಿನಿಂದ ಸಾಲಿಗೆ ೨½ ಯಿಂದ ೩ ಅಡಿ ಅಂತರವಿರಬೇಕು. ಆಳ ೮" ದಿಂದ ೯" ಇದ್ದರೆ ಸಾಕು. ನೀರುಗಾಲುವೆಯನ್ನು ನೀರುಹಾಯಿ

ಸಲು ಅನುಕೂಲವಾಗುವಂತೆ ಮಾಡಬೇಕು. ಕರಿಮಣ್ಣು ಮತ್ತು ಮೆಕ್ಕಲು ಮಣ್ಣಿನ ಪ್ರದೇಶಗಳಲ್ಲಿ ಸಾಲು ಉದ್ದವಾಗಿದ್ದರೆ, ಕೆರೆಗೋಡು, ಗೋಡು ಮಣ್ಣಿನಲ್ಲಿ ಚಿಕ್ಕದಾಗಿದ್ದರೆ ಸಾಕು. ಹಸಿರೆಲೆ ಗೊಬ್ಬರ, ಹಟ್ಟಿ ಗೊಬ್ಬರ, ಕಾಂಪೋಸ್ಟು ಮುಂತಾದವುಗಳನ್ನು ಸಾಲುಮಾಡುವ ಮುಂಚೆ ಜಮೀನಿನಲ್ಲಿ ಹಾಕಿ ಮಣ್ಣು ಸೇರಿಸಿ ಉಳುಮೆ ಮಾಡಿ ಆಮೇಲೆ ಸಾಲು, ದಿಬ್ಬಗಳನ್ನು ತೆಗೆಯಬೇಕು.

ಬೀಜ :

"ಬೀಜದಂತೆ ಬೆಳೆ" ಎಂಬ ನಾಣ್ಣುಡಿಯ ಮಾತು ಸರ್ವ ವಿದಿತವಾದುದು. ಇದು ಎಲ್ಲ ಬೆಳೆಗಳ ವಿಚಾರದಲ್ಲಿ ಸರಿ ಹೋಗುತ್ತದೆ. ಹಾಗೆಯೇ ಕಬ್ಬಿಗೂ ಅನ್ವಯಿಸುತ್ತದೆ. ಹೆಚ್ಚು ಕಾಲ ಜಮೀನಿನಲ್ಲಿ ನಿಲ್ಲುವ ಬೆಳೆಗಳಾದ ಕಬ್ಬು, ತೆಂಗು ಮುಂತಾದವುಗಳಲ್ಲಿ ಒಳ್ಳೆಯ ಬೀಜದ ಬಿತ್ತನೆ ಮಾಡುವದು ಅಗತ್ಯವೇ ಆಗಿದೆ. ಉಳಿದ ಬೆಳೆಗಳಲ್ಲಿ ಒಂದು ವೇಳೆ ಉಪಯೋಗಿಸಿದ ಬೀಜವು ಉತ್ತಮ ತರಗತಿಯದು ಇಲ್ಲವೆ ಇದ್ದರೂ ಚೆನ್ನಾದ ಬೆಳೆ ಬಂದಿದ್ದರೂ ಅವೆಲ್ಲ ೩-೪ ತಿಂಗಳ ಬೆಳೆಗಳಾದುದರಿಂದ ಇನ್ನೊಂದು ಬೆಳೆ ತೆಗೆಯುವ ಅವಕಾಶ ಇದ್ದೇ ಇರುತ್ತದೆ. ಆದರೆ ಕಬ್ಬಿನಲ್ಲಿ ಮಾತ್ರ ಹಾಗಲ್ಲ. ಒಂದು ವರ್ಷವೇ ಹಾಳಾಗುತ್ತದೆ. ಹೀಗಾಗಿ ಇಲ್ಲಿ ಬೀಜದ ಮಹತ್ವ ಅತಿ ಹೆಚ್ಚಿನದಾಗಿದೆ. ಕಬ್ಬಿನ ಬೀಜವೆನ್ನುವದು ಸಾಧಾರಣವಾಗಿ ಮೂರು ಕಣ್ಣುಗಳುಳ್ಳ, ಒಂದು ಕಬ್ಬಿನ ತುಂಡು ಆಗಿರುತ್ತದೆ. ಸಸ್ಯಜನ್ಯ ಪ್ರತ್ಯುತ್ಪತ್ತಿ ಮಾಡಲು ಸಾಧ್ಯವಿರುವದರಿಂದ ಈ ರೀತಿಯೇ

ಅಭಿವೃದ್ಧಿ ಮಾಡುತ್ತಾರೆ. ಹಾಗೆಯೇ ಈ ಬೆಳೆಯಲ್ಲಿ ನಿಜವಾದ ಬೀಜ ಕೂಡ ಇದೆ. ಹೊಸ ತಳಿಗಳನ್ನು ಕಂಡು ಹಿಡಿಯುವಾಗ ಸಂಕರಣ ಕಾರ್ಯ ಮಾಡಿ ಬೀಜವನ್ನು ತಯಾರಿಸಿ ಬಿತ್ತಿ ಬೆಳೆಸುತ್ತಾರೆ. ಆಮೇಲೆ ಮಾತ್ರ ಪುನಃ ಬೀಜ ಮಾಡುವ ಅಗತ್ಯ ಕಂಡು ಬರುವದಿಲ್ಲ. ಈ ವಿಚಾರ ಹೀಗೇ ಇದ್ದರೂ ಸಾಧಾರಣವಾಗಿ ರೂಢಿಯಲ್ಲಿ ಬಂದಿರುವದು ಕಬ್ಬಿನ ಬೀಜ ಅಂದರೆ ೩ ಕಣ್ಣುಗಳುಳ್ಳ ಒಂದು ತುಂಡು.

ಕಬ್ಬು ಎಳೆಯದಾದಷ್ಟು ಅಂದರೆ ೮ ರಿಂದ ೯ ತಿಂಗಳದಾದಷ್ಟು ಬೀಜ ತಯಾರಿಸಲು ಒಳ್ಳೆಯದು. ಬೆಳೆದ ಕಬ್ಬಿನಲ್ಲಿ ಸಕ್ಕರೆ ಅಂಶವಿರುವದರಿಂದ ಬೀಜಕ್ಕಾಗಿ ಉಪಯೋಗಿಸಿದರೆ ಮೊಳಕೆಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಪ್ರಮಾಣ ಕಡಿಮೆಯಾಗುತ್ತದೆ; ತಡವಾಗಿ ಬರುತ್ತದೆ. ಹೀಗಾಗಿ ಬೆಳೆದ ಬಲಿತ ಕಬ್ಬನ್ನು ಬೀಜಕ್ಕಾಗಿ ಉಪಯೋಗಿಸಬಾರದು. ಬಿತ್ತನೆಗೋಸ್ಕರವಾಗಿಯೇ ಕಬ್ಬನ್ನು ಬಿತ್ತಲು ಉತ್ತಮ ಗೊಬ್ಬರ, ಸಾಕಷ್ಟು ನೀರು ಕೊಟ್ಟು ರೋಗ ರಹಿತ ಮತ್ತು ಕೀಟ ರಹಿತ ಬೆಳೆಯನ್ನು ಆರಿಸುವದು ಉತ್ತಮ. ಹಾಗೆಯೇ ಹೂವಾಡುವದಕ್ಕಿಂತ ಮುಂಚಿತವಾಗಿ ಕಟಾವು ಮಾಡುವದು ಒಳ್ಳೆಯದು. ಯಾಕೆಂದರೆ ಕಬ್ಬು ಆ ಸಮಯದಲ್ಲಿ ೧೦ ತಿಂಗಳಿನದ್ದಾಗಿರುತ್ತದೆ, ಹಾಗೂ ಉತ್ತಮ ಫಲ ದೊರಕಲು ಸಾಧ್ಯವಾಗುತ್ತದೆ. ಬೀಜದಿಂದಲೇ ಕೆಲವು ಮುಖ್ಯ ರೋಗಗಳು, ಕೀಟಗಳು ಹರಡುತ್ತವೆ. ಹೀಗಾಗಿ ಕೀಟದ ಬಾಧೆಗೆ ಒಳಪಡದ ಮತ್ತು ರೋಗ ರಹಿತವಾದ ತಾಕುಗಳನ್ನು ಬೀಜಕ್ಕಾಗಿ ಆಯ್ಕೆಮಾಡಬೇಕಾಗುತ್ತದೆ. ಬೆಳೆದ ಕಬ್ಬನ್ನೇ ಉಪಯೋಗಿಸಬೇಕಾದ ಸಂದರ್ಭದಲ್ಲಿ ಕಬ್ಬಿನ

ಮೇಲಿನ ⅔ ಭಾಗವನ್ನು ಬೀಜಕ್ಕಾಗಿ ಉಪಯೋಗಿಸಬೇಕು. ಆ ಭಾಗದಲ್ಲಿ ಸಕ್ಕರೆ ಅಂಶ ಕಡಿಮೆ ಇರುತ್ತದೆ. ಕೆಳಗಿನ ⅓ ಭಾಗ ದಲ್ಲಿ ಹೆಚ್ಚಿಗಿರುತ್ತದೆ. ಹೀಗಾಗಿ ಇಡೀ ಕಬ್ಬನ್ನು ಬೀಜಕ್ಕಾಗಿ ಉಪಯೋಗಿಸಿದಲ್ಲಿ ಒಂದೇ ಮಟ್ಟದಲ್ಲಿ ಮೊಳಕೆ ಬರುವದಿಲ್ಲ. ಹಾಗೇನೇ ನಾವು ಬೆಳೆಸಿದ ಒಂದು ಉದ್ದೇಶ ಕೂಡ ತಪ್ಪಿ ಹೋಗುತ್ತದೆ. ಕಬ್ಬು ಬೆಳೆಸುವದು ಬೆಲ್ಲ ಮತ್ತು ಸಕ್ಕರೆಗಾಗಿ, ಅದನ್ನು ನಾವು ಕಳಕೊಂಡಂತಾಗುತ್ತದೆ. ಇವೆಲ್ಲವನ್ನು ಗಮನ ದಲ್ಲಿಟ್ಟುಕೊಂಡು ಬೀಜಕ್ಕೋಸ್ಕರ ತಾಕನ್ನು ಆಯ್ಕೆಮಾಡ ಬೇಕು ಮತ್ತು ಕಬ್ಬಿನ ಗರಿ ತೆಗೆದು ತುಂಡನ್ನಾಗಿ ಕತ್ತರಿಸಬೇಕು. ಪ್ರತಿ ತುಂಡಿನಲ್ಲಿ ೩ ಕಣ್ಣುಗಳಿರಬೇಕು. ಒಂದು ಎಕರೆಗೆ ಸುಮಾರು ೧೦,೦೦೦ ದಿಂದ ೧೨,೦೦೦ ತುಂಡುಗಳು ಬೇಕಾಗು ತ್ತವೆ. ಈ ರೀತಿ ಬೀಜಕ್ಕೋಸ್ಕರ ತಾಕುಗಳನ್ನು ಆಯ್ಕೆಮಾಡಿ ಬೀಜವನ್ನು ತಯಾರು ಮಾಡಬೇಕು. ಇಲ್ಲದಿದ್ದಲ್ಲಿ ಮೇಲೆ ಹೇಳಿದಂತೆ ಸಕ್ಕರೆ ಕಾರಖಾನೆಗೂ, ಆಲೆಯ ಮನೆಗೂ. ಕಳಿಸುವ ದಕ್ಕಿಂತ ಮುಂಚೆಯೇ ಬೀಜದ ತುಂಡುಗಳನ್ನು ಬೇರ್ಪಡಿಸಿ ಉಪಯೋಗಿಸಬೇಕು.

ಇನ್ನು ನಂತರ ಬರುವ ಪ್ರಶ್ನೆ ಎಂದರೆ ಬೀಜಕ್ಕಾಗಿ ಮಾಡಿದ ತುಂಡುಗಳನ್ನು ಎಷ್ಟು ಸಮಯದೊಳಗೆ ನೆಟ್ಟು ಮುಗಿಸಬೇಕು. ಇದು ಕೂಡ ಅತಿ ಮಹತ್ವದ ವಿಚಾರ. ಯಾವದಾದರೂ ಕಾರಣದಿಂದ ಕಬ್ಬು ಕಟಾವಾದ ಕೂಡಲೇ ನೆಡುವದು ಸಾಧ್ಯವಾಗದಿದ್ದಲ್ಲಿ ಒಂದೆರಡು ದಿನಗಳಿಂದ ಹಿಡಿದು ೩೦, ೪೦ ದಿನಗಳ ವರೆಗೆ ಹಾಗೆಯೇ ಇಡುವ ಪ್ರಸಂಗ ಬಂದರೂ ಬರಬಹುದು. ಆದರೆ ಅತಿ ಹೆಚ್ಚಿನ ಮಟ್ಟದಲ್ಲಿ

ಹಾಗೂ ಶೀಘ್ರದಲ್ಲಿ ಮೊಳಕೆ ಬರಬೇಕಾದರೆ ತುಂಡು ಮಾಡಿದ ೨೪ ತಾಸುಗಳಲ್ಲಿಯೇ ನೆಟ್ಟು ಮುಗಿಸಬೇಕು. ಹೀಗೆ ಮಾಡಿದರೆ ಕಬ್ಬನ್ನು ಒಣಗಲು ಅವಕಾಶ ಕೊಟ್ಟಂತಾಗುವದಿಲ್ಲ. ಇಂತಹ ಸಂದರ್ಭದಲ್ಲಿ ಕೂಡ ಅವನ್ನು ನೆರಳಿನಲ್ಲಿ ಶೇಖರಿಸಿಡಬೇಕು ಹಾಗೂ ತೊಪ್ಪಲು ಮುಂತಾದವುಗಳಿಂದ ಮುಚ್ಚಿಡುವದು ಒಳ್ಳೆಯದು. ಒಣಗಿದರೆ ಪ್ರಯೋಜನವಿಲ್ಲ. ಹೀಗಾಗಿ ಜಾಗರೂಕತೆಯನ್ನು ವಹಿಸಲೇ ಬೇಕಾಗುತ್ತದೆ. ಹಾಗೆಯೇ ಕೆಲವು ಕಡೆಗಳಲ್ಲಿ ನೆಡುವುದಕ್ಕಿಂತ ೨೪ ತಾಸು ಮುಂಚಿನಿಂದ ಹರಿಯುವ ನೀರಿನಲ್ಲಿ ಕಬ್ಬಿನ ತುಂಡುಗಳನ್ನು ನೆನೆಸಿಡುವ ಒಂದು ಕ್ರಮವಿದೆ. ಇದು ಒಳ್ಳೆಯ ಕ್ರಮ. ಈ ರೀತಿ ಮಾಡುವದ ರಿಂದ ಕಬ್ಬಿನ ತುಂಡುಗಳಲ್ಲಿ ಹೆಚ್ಚಿಗಿದ್ದ ಸಕ್ಕರೆ ಅಂಶ ತೊಳೆದು ಹೋದಂತಾಗುತ್ತದೆ. ಮತ್ತು ಮೊಳಕೆಯೊಡೆಯಲು ಸಹಾಯ ವಾಗುತ್ತದೆ. ಹೀಗಾಗಿ ತುಂಡುಗಳು ಒಣಗದಂತೆ ಶೇಖರಿಸಿಡು ವದೂ ಹಾಗೂ ನೀರಿನಲ್ಲಿ ಬಿಟ್ಟು ಅನಂತರ ನೆಡುವದೂ ಒಳ್ಳೆಯದು. ಆದರೆ ೨೪ ತಾಸುಗಳಲ್ಲಿ ನೆಟ್ಟುಬಿಡುವದಾದರೆ ಉತ್ತಮ.

ಹೆಚ್ಚಿಗೆ ರೋಗಗಳು ಬೀಜದಿಂದ ಹರಡುತ್ತವೆ. ಇವು ಗಳಿಂದ ತಪ್ಪಿಸಿಕೊಳ್ಳಲು " ಬೀಜೋಪಚಾರ " ಮಾಡಬೇಕಾಗು ತ್ತದೆ. ಪಾದರಸ ಸಂಯುಕ್ತ ಶಿಲೀಂದ್ರಹಾರಿಗಳಾದ ಎಗಲೊಲ, ಎಕಿಟಾನ್ ಮುಂತಾದವುಗಳನ್ನು ಉಪಯೋಗಿಸಬೇಕಾಗುತ್ತದೆ. ೩೬ ಗ್ರಾಂ. ರಾಸಾಯನಿಕವನ್ನು ೧೮ ಲೀಟರ ನೀರಿನಲ್ಲಿ ಕರಗಿಸಿ ದ್ರಾವಣ ತಯಾರಿಸಬೇಕು. ಈ ದ್ರಾವಣದಲ್ಲಿ ನೆಡುವದಕ್ಕೆ ಮುಂಚೆ ಕಬ್ಬಿನ ತುಂಡುಗಳನ್ನು ಅದ್ದಿ ನೆಡಬೇಕು. ಈ ರೀತಿ

ಮಾಡುವದರಿಂದ ಬೀಜದಿಂದ ಹರಡಬಹುದಾದಂತಹ ಅನಾನಸು ರೋಗವನ್ನು ತಡೆಗಟ್ಟಿದಂತಾಗುತ್ತದೆ. ರೋಗ ರಹಿತ ಬೆಳೆಯನ್ನು ಆರಿಸಿದ್ದರೂ ಸಹ ತುಂಡರಿಸಿದಾಗ ಕಾರಣಾಂತರಗಳಿಂದ ರೋಗಾಣುಗಳು ಬೀಜವನ್ನು ಸೇರಲು ಸಾಧ್ಯತೆ ಇದೆ. ಅದನ್ನು ತಪ್ಪಿಸಲು ಮೇಲಿನ ಕ್ರಮ ಅಗತ್ಯವಾಗಿದೆ.

ಹಾಗೆಯೇ ಇತ್ತೀಚಿನ ದಿನಗಳಲ್ಲಿ ೨ ನಂಜುರೋಗಗಳು ಕಬ್ಬಿನ ಬೆಳೆಗೆ ಬಹುವಾಗಿ ಕಾಡಲು ಹತ್ತಿವೆ, ಮತ್ತು ಹಬ್ಬುತ್ತಾ ಇವೆ. ಅವು ಯಾವುವೆಂದರೆ Ratoon stunting ಹಾಗೂ Grassy shoot ಈ ರೋಗಗಳು ಬಂದ ಮೇಲೆ ಯಾವ ನಿವಾರಣೋಪಾಯಗಳೂ ಇಲ್ಲ. ರೋಗ ಬಂದಂತಹ ಬೆಳೆಯಲ್ಲಿ ಈ ಕೆಳಗಿನ ಲಕ್ಷಣಗಳು ಕಾಣುತ್ತವೆ. Grassy shoot ರೋಗದಲ್ಲಿ ಜಲ್ಲೆಗಳು ಬರುವದರ ಬದಲು ಹುಲ್ಲು ಬೆಳೆದಂತೆ ಹಳದೀ ಬಣ್ಣದ ಎಲೆಗಳೇ ಬೆಳೆಯುತ್ತವೆ. ಹಾಗೆ ಬೆಳೆವಣಿಗೆ ಅಲ್ಲಿಗೇ ನಿಲ್ಲುತ್ತವೆ. Ratoon Stunting ರೋಗ ಬಂದರೆ ಬೆಳೆ ಉದ್ದವಾಗಿ ಬೆಳೆಯದೆ ಸಣ್ಣದಾಗಿಯೇ ಇರುತ್ತದೆ. ರೋಗ ಬಾರದಂತೆ ತಡೆಗಟ್ಟುವದೇ ಇದಕ್ಕೆ ಇರುವ ಉಪಾಯ. ಕಬ್ಬಿನ ತುಂಡುಗಳನ್ನು ೫೦°c ಬಿಸಿನೀರಿನಲ್ಲಿ ೨ ಘಂಟೆಗಳ ಕಾಲ ಅಥವಾ ೫೪°c ಬಿಸಿಹವೆಯಲ್ಲಿ ೮ ಘಂಟೆಗಳ ಕಾಲ ಉಪಚಾರ ಮಾಡಿ ಆಮೇಲೆ ಬಿತ್ತಲು ಉಪಯೋಗಿಸಬೇಕು. ಈ ಕೆಲಸ ರೈತರಿಂದ ಸಾಧ್ಯವಾಗದ ಕೆಲಸ. ಹೀಗಾಗಿ ಅವರು ಮಾಡಬೇಕಾದುದು ಏನಂದರೆ ವ್ಯವಸಾಯ ಪರಿಶೋಧನಾ ಕ್ಷೇತ್ರಗಳಲ್ಲಿ ಈ ರೀತಿಯ ಉಪಚಾರ ಮಾಡಿ ಬೆಳೆ ಬೆಳೆಸುತ್ತಾರೆ. ಆ ಬೆಳೆಯಿಂದ ಬೀಜಕ್ಕಾಗಿ ಕಬ್ಬನ್ನು ಆಯ್ಕೆ ಮಾಡಬೇಕಾಗುತ್ತದೆ.

ಒಂದು ಸಲ ಮೇಲೆ ಹೇಳಿದಂತೆ ಉಪಚಾರ ಮಾಡಿದ ಮೇಲೆ ಪುನಃ ೫ ವರ್ಷಗಳ ವರೆಗೆ ಬೇಕಾಗುವದಿಲ್ಲ. ಈ ರೀತಿ ಮಾಡುವದರಿಂದ ಮೇಲೆ ಹೇಳಿದ ೨ ನಂಜು ರೋಗಗಳನ್ನೂ ಹಾಗೂ ಕಾಡಿಗೆ ರೋಗವನ್ನೂ ತಡೆಗಟ್ಟಿದ ಹಾಗಾಗುತ್ತದೆ. ಈ ವಿಚಾರವನ್ನು ಕೂಡ ಗಮನದಲ್ಲಿಡುವದು ಅವಶ್ಯ.

ಇನ್ನೊಂದು ಮುಖ್ಯ ವಿಚಾರವೆಂದರೆ ೪ ರಿಂದ ೫ ವರ್ಷಗಳಿಗೊಮ್ಮೆ ಬೀಜ ಬದಲಾಯಿಸುವದು ಮುಖ್ಯ. ಒಂದು ಸಲ ತಂದ ಬೀಜವನ್ನು ಉಪಯೋಗಿಸಿ ಬೆಳೆ ಬೆಳೆಸುತ್ತಾ ಹೋದರೆ ೫ ವರ್ಷಗಳಾದ ಮೇಲೆ ಅದು ತನ್ನ ಪ್ರಾರಂಭಿಕ ಗುಣವನ್ನು ಕಳೆದುಕೊಳ್ಳುವದು ಸ್ವಾಭಾವಿಕ. ಇದು ಎಲ್ಲ ಬೆಳೆಗಳ ವಿಚಾರದ ಹಾಗೆ ಈ ಬೆಳೆಗೂ ಅನ್ವಯಿಸುತ್ತದೆ. ಆದರೆ, ಒಳ್ಳೆಯ ರೀತಿಯಾಗಿ ಪಾಲನೆ-ಪೋಷಣೆ ಮಾಡಿದರೆ ಉಪಯೋಗಿಸುತ್ತಾ ಹೋಗಬಹುದು. ಆಗ ಕಬ್ಬು ತನ್ನ ಗುಣವನ್ನು ಕಳೆದುಕೊಳ್ಳುವದಿಲ್ಲ. ಈ ವಿಚಾರವನ್ನು ಸಂಶೋಧನಾ ಕೇಂದ್ರಗಳಲ್ಲಿ ಕಂಡು ಹಿಡಿದಿದ್ದಾರೆ. ಜೋಳದ ಕಡ್ಡಿಯ ಹಾಗೆ ಗಾತ್ರ ಕಡಿಮೆಯಾಗಿ ಇದ್ದಂತಹ ಕಬ್ಬಿನಿಂದ ಬೀಜವನ್ನು ಆಯ್ಕೆ ಮಾಡಿ ಸರಿಯಾದ ಪಾಲನೆ ಮಾಡಿದಾಗ ೨ ವರ್ಷಗಳಲ್ಲಿ ಅದು ತನ್ನ ಹಿಂದಿನ ಸ್ವರೂಪವನ್ನು ಪಡೆದಿರುವ ನಿದರ್ಶನಗಳಿವೆ. ಈ ವಿಚಾರದಿಂದಾಗಿಯೇ ಸರಿಯಾಗಿ ಪಾಲನೆಮಾಡಿದರೆ ಪುನಃ ಪುನಃ ಅದನ್ನೇ ಬೀಜಕ್ಕೆ ಉಪಯೋಗಿಸಲು ಸಾಧ್ಯ ಮತ್ತು ಬೀಜ ಬದಲಾಯಿಸುವ ಅಗತ್ಯ ಬೀಳಲಾರದು ಎಂದು ಹೇಳುವುದರ ಅರ್ಥ.

ಬೀಜದ ವಿಚಾರದಲ್ಲಿ ಮೇಲ್ಕಂಡ ವಿಷಯಗಳನ್ನು ಗಮನದಲ್ಲಿಡಲೇ ಬೇಕು. ಇನ್ನು ತಳಿಗಳ ಬಗ್ಗೆ ನಮ್ಮ ರಾಜ್ಯದಲ್ಲಿ ಸ್ಥಳೀಯ ತಳಿಯಾದ "ಚೇಣಿ" ಬಳಕೆಯಲ್ಲಿತ್ತು. ಸಿ. ಓ. ೨೯೦ ಬೀದರ್‌ದಲ್ಲೂ, ಐ, ಸಿ. ೨೬ ಹಾಸನದಲ್ಲಿಯೂ, ಎಚ್ ನಂ. ೨೨೦ ಶಿವಮೊಗ್ಗಾ ಪ್ರದೇಶದಲ್ಲಿಯೂ ಉಪಯೋಗದಲ್ಲಿದ್ದವು. ಅವೆಲ್ಲವೂ ಈಗ ಸಿ. ಓ, ೪೧೯ ಮತ್ತು ಸಿ. ಓ. ೭೪೦ ತಳಿಗಳು ಬಂದುದರಿಂದ ಹಿಂದೆ ಸರಿದಿವೆ.

ತಳಿಗಳ ಮಾಹಿತಿ:

ತಳಿಯ ಹೆಸರು	ಬೆಳೆಯಲು ಸಲಹೆ ಮಾಡಿದ ಪ್ರದೇಶ	ತಳಿಯ ಗುಣಗಳು
CO-419	ರಾಜ್ಯದ ಎಲ್ಲ ಭಾಗಗಳಲ್ಲಿ ಬೆಳೆಯಲು	ಮಧ್ಯಮ ಗಾತ್ರ ೧೩-೧೪ ತಿಂಗಳಲ್ಲಿ ಕಟಾವಿಗೆ ಬರುತ್ತದೆ. ಹಸುರಿನಿಂದ ಬೂದು ಮಿಶ್ರಿತ ಕೆಂಪು ಬಣ್ಣದಿಂದ ಕೂಡಿದೆ. ಬೆಲ್ಲ, ಸಕ್ಕರೆ ಅಂಶವು ಚನ್ನಾಗಿದೆ. ಬೆಲ್ಲದ ಬಣ್ಣ ಕೆಂಪು ಮಿಶ್ರಿತ ಹಳದಿ. ಬೇಗನೆ ಕೆಡುವುದಿಲ್ಲ. ಕುಳೆಯ ಬೆಳೆಯೂ ಸಹ ಒಳ್ಳೆ ಇಳುವರಿ ಕೊಡುತ್ತದೆ.

ತಳಿಯ ಹೆಸರು	ಬೆಳೆಯಲು ಸಲಹೆ ಮಾಡಿದ ಪ್ರದೇಶ	ತಳಿಯ ಗುಣಗಳು
CO-740	ಬೀದರ, ಬೆಳಗಾಂವ, ತುಂಗಭದ್ರಾ ಪ್ರದೇಶ	ಮಧ್ಯಮ ಗಾತ್ರ ಸಿ. ಓ.-೪೧೯ ಕ್ಕಿಂತಲೂ ಬೇಗ ಕಟಾವಿಗೆ ಬರುತ್ತದೆ. ಹಸುರು ಬಣ್ಣ ತೆಂಡೆ ಬಹಳ ಒಡೆಯುತ್ತದೆ. ಉತ್ತಮ ಬೆಲ್ಲ. ಆದರೆ ಇವಕ್ಕೆ ಕಾಡಿಗೆ ರೋಗ ಬಹಳ.
CO-449	ಕರಾವಳಿ ಪ್ರದೇಶ	ಎತ್ತರ ನಿಲವು ತೆಂಡೆ ಬಹಳ ಬೇಗ ಕಟಾವಿಗೆ ಬರುತ್ತದೆ. ಕರಿ ಮಣ್ಣು ಮೆಕ್ಕಲು ಮಣ್ಣಿನಲ್ಲಿ ಬೆಳೆಯಲು ಯೋಗ್ಯ. ಹಳದಿ ಚುಕ್ಕೆರೋಗ ನಿರೋಧಕ ತಳಿ. ಕುಳೆಯ ಬೆಳೆ ಹೆಚ್ಚಿನ ಇಳುವರಿ ಕೊಡುವದಿಲ್ಲ.
IC-22›	ಮಂಡ್ಯ ಮತ್ತು ಬೀದರ ಪ್ರದೇಶ-ಗಳಲ್ಲಿ	ಮಧ್ಯಮ ಗಾತ್ರ ಹಳದೀ ಬಣ್ಣ ಉತ್ತಮವಾಗಿ ತೆಂಡೆ ಹೊಡೆಯುತ್ತದೆ. ೧೦ ತಿಂಗಳಲ್ಲಿ ಕಟಾವಿಗೆ ಬರುತ್ತದೆ. ಸಕ್ಕರೆ ಅಂಶ ಚೆನ್ನಾಗಿದೆ.

ತಳಿಯ ಹೆಸರು	ಬೆಳೆಯಲು ಸಲಹೆ ಮಾಡಿದ ಪ್ರದೇಶ	ತಳಿಯ ಗುಣಗಳು
CO-62175	ಮಂಡ್ಯ, ತುಂಗಭದ್ರಾ ಪ್ರದೇಶಗಳಲ್ಲಿ	ಇತ್ತೀಚೆಗೆ ಬಂದಿರುವಂತಹ ತಳಿ, ಮಧ್ಯಮಗಾತ್ರ, ಹಸಿರು ಮಿಶ್ರಿತ ಹಳದಿ ಬಣ್ಣ, ಹುಲುಸಾಗಿ ತೆಂಡೆ ಹೊಡೆಯುತ್ತದೆ. ಕಣ್ಣುಗಳು ಮುಖ್ಯವಾಗಿ ಇರುತ್ತವೆ. ಬೆಳವಣಿಗೆಯ ಕಾಲದಲ್ಲಿ ಹರಡಿಕೊಂಡು ಅನಂತರ ನೇರವಾಗಿ ಬೆಳೆಯುತ್ತದೆ. ಹೆಚ್ಚು ಇಳುವರಿ ಕೊಡುತ್ತದೆ. ರಸದ ಅಂಶ ಒಂದಿಷ್ಟು ಕಡಿಮೆ. ಕೂಳೆಯ ಬೆಳೆ ಒಳ್ಳೆಯ ಇಳುವರಿ ಕೊಡುತ್ತದೆ.
H-2045	ಮಂಡ್ಯಜಿಲ್ಲೆ	ಸುಳಿರೋಗ ಬಾರದ ತಳಿ, ಮಧ್ಯಮ ಗಾತ್ರ, ಬಿಳಿಮಿಶ್ರಿತ ಹಸಿರು ಬಣ್ಣ, ಉತ್ತಮ ಬೆಲ್ಲ, ಕೂಳೆಯ ಬೆಳೆ ಉತ್ತಮ. ಸುಳಿರೋಗ ಬಾರದೇ ಇದ್ದುದರಿಂದ ವರ್ಷ ಪೂರ್ತಿ ಕಬ್ಬು ಕಾರಖಾನೆಗೆ ಒದಗಿಸಲು ಸಾಧ್ಯ.

ನಾಟಿಮಾಡುವ ಕಾಲ:

ಮೂರು ಮುಖ್ಯ ಕಾಲಗಳಲ್ಲಿ ಕಬ್ಬನ್ನು ನಾಟಿ ಮಾಡಬಹುದು ಜುಲೈ–ಅಗಷ್ಟ, ಆಕ್ಟೋಬರ–ನವೆಂಬರ ಹಾಗೂ ಜನೆವರಿ–ಫೆಬ್ರುವರಿ. ಆದರೆ ಹೆಚ್ಚು ಚಳಿ ಇದ್ದಾಗ ಹಾಗೂ ಹೆಚ್ಚು ಮಳೆ ಬೀಳುವ ಕಾಲದಲ್ಲಿ ನಾಟಿ ಮಾಡಬಾರದು. ಇಲ್ಲಿ ನಾವು ಒಂದು ಮುಖ್ಯ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು; ಕಬ್ಬಿನಲ್ಲಿ ವಿಶೇಷವೆಂದರೆ ಯಾವ ತಿಂಗಳಿನಲ್ಲಿ ನೆಟ್ಟರೂ ಅದು ಮೊಳಕೆ ಬರುತ್ತದೆ. ಹಾಗೂ ಬೆಳೆಯುತ್ತದೆ. ಆದರೆ ಚಳಿ ಜಾಸ್ತಿ ಇದ್ದಾಗ ಅಥವಾ ಹೆಚ್ಚು ಮಳೆ ಬಿದ್ದಲ್ಲಿ ಮೊಳಕೆ ಬರುವದು ತಡವಾಗುತ್ತದೆ. ಹೀಗಾಗಿ ಅಂತಹ ಸಂದರ್ಭಗಳು ಸರಿಯಾಗುವದಿಲ್ಲ. ಇನ್ನೊಂದು ವಿಚಾರವೆಂದರೆ ಕಬ್ಬಿನಲ್ಲಿ ಸೂಲಂಗಿ ಅಥವಾ ಗರಿ ಬರುವದು ಅಥವಾ ಹೂವಾಡುವದು ಎಲ್ಲರಿಗೂ ತಿಳಿದ ವಿಷಯ. ಸೂಲಂಗಿ ಬಂದಿತೆಂದರೆ ಕಬ್ಬಿನ ಬೆಳವಣಿಗೆ ನಿಂತಿತೆಂದು ಅರ್ಥ. ಆ ಮೇಲೆ ಸಕ್ಕರೆ ಅಂಶ ಹೆಚ್ಚಾಗಲು ಪ್ರಾರಂಭವಾಗುತ್ತದೆ. ಈ ಸೂಲಂಗಿಯು ಅಕ್ಟೋಬರ ತಿಂಗಳಿನಲ್ಲಿ ಬರುತ್ತದೆ. ನಮ್ಮ ಹಳ್ಳಿಗರ ಭಾಷೆಯಲ್ಲಿ ಹೇಳಬೇಕಾದರೆ ಸ್ವಾತಿ ನಕ್ಷತ್ರದ ಮಳೆ ಬಿದ್ದೊಡನೆ ಕಬ್ಬು ಹೂವಾಡುತ್ತದೆ. ಅದಕ್ಕಿಂತ ಮೊದಲು ಅಲ್ಲ. ಹೀಗಾಗಿ ಅದು ನಿಶ್ಚಿತ ಸಮಯದಲ್ಲಿ ಆಗುತ್ತದೆ. ಆದ್ದರಿಂದ ತಡವಾಗಿ ಕಬ್ಬು ನೆಟ್ಟರೆ ಬೆಳವಣಿಗೆಗೆ ಅವಕಾಶ ಸಿಗದಂತಾಗುತ್ತದೆ. ಅಂದರೆ ಹೂ ಬರುವದಕ್ಕಿಂತ ಮುಂಚಿತವಾಗಿ ಅದಕ್ಕೆ ಬೆಳೆಯಲು ಆದಷ್ಟು ಹೆಚ್ಚಿನ ಅವಕಾಶ ಕೊಡುವದು ನಮ್ಮ ಕರ್ತವ್ಯವಾಗಿರುತ್ತದೆ. ಉದಾಹರಣೆಗೆ ಹೇಳುವದಾದರೆ

ಡಿಸೆಂಬರ ತಿಂಗಳಿನಿಂದ ಮೇ ತಿಂಗಳ ವರೆಗೆ ಯಾವುದೇ ತಿಂಗಳಲ್ಲಿ ನೆಟ್ಟರೂ ಅಕ್ಟೋಬರ ತಿಂಗಳಲ್ಲಿ ಹೂವಾಡುತ್ತದೆ. ಜೂನ ತಿಂಗಳಿನಲ್ಲಿ ನೆಟ್ಟರೆ ಮುಂದಿನ ವರ್ಷದ ಅಕ್ಟೋಬರ ತಿಂಗಳಿನಲ್ಲಿ ಹೂವಾಡುತ್ತದೆ. ಅಂದರೆ ೧೮ ತಿಂಗಳ ಬೆಳೆಯಾಗುತ್ತದೆ. ಇದಕ್ಕೆ "ಅಡಸಾಲಿ" ಬೆಳೆ ಎನ್ನುತ್ತಾರೆ. ೧೨ ತಿಂಗಳಿನದಾದರೆ "ಎಕಸಾಲಿ" ಬೆಳೆ ಎನ್ನುತ್ತಾರೆ. ಇದನ್ನು ನೋಡಿಕೊಂಡೇ ನಾವು ೧೨ ತಿಂಗಳ ಬೆಳೆಯನ್ನೂ, ೧೮ ತಿಂಗಳ ಬೆಳೆಯನ್ನೂ ಬೆಳೆಯಬಹುದು. ಚಳಿ ಕಡಿಮೆ ಆದಮೇಲೆ ಅಂದರೆ ಸಂಕ್ರಮಣವು ಈ ಬೆಳೆಯನ್ನು ನೆಡಲು ಅತೀ ಯೋಗ್ಯ ಸಮಯ. ಹಾಗೆಯೇ ಶಿವರಾತ್ರಿಯ ಸಮಯದ ವರೆಗೆ ಇದನ್ನು ಮುಂದುವರಿಸ ಬಹುದು. ಅನಂತರ ಮುಂದುವರಿಸಿದರೆ ಬೆಳವಣಿಗೆಗೆ ಲಭ್ಯ ವಾಗುವ ಸಮಯ ಬಹಳ ಕಡಿಮೆಯಾಗುತ್ತದೆ, ಅಂತಹ ಪ್ರಸಂಗ ಬಂದಲ್ಲಿ ಬಾಕಿ ಪರಿಸ್ಥಿತಿ ಅನುಕೂಲವಿದ್ದಲ್ಲಿ ಜುಲೈ-ಅಗಷ್ಟ ತಿಂಗಳಲ್ಲಿ ನೆಡುವದು ಒಳ್ಳೆಯದು. ಈ ರೀತಿ ಸಾಧ್ಯ ವಿಲ್ಲದಿದ್ದಲ್ಲಿ ಮುಂದಿನ ಅಕ್ಟೋಬರ ತಿಂಗಳಿನ ವರೆಗೆ ಕಾಯುವದು ಉತ್ತಮ. ಈ ವಿಚಾರವನ್ನು ಕಬ್ಬು ಬೆಳೆಗಾರರು ಜಾಗರೂಕತೆ ಯಿಂದ ಅನುಸರಿಸಬೇಕು.

ನಾಟಿಮಾಡುವ ಕ್ರಮ :

ಮಣ್ಣಿನ ಗುಣಕ್ಕೆ ಅನುಸಾರವಾಗಿ ಮೊದಲು ಜಮೀನನ್ನು ೨⅔-೩ ಅಡಿ ಅಂತರದಲ್ಲಿ ತಗ್ಗು ದಿನ್ನೆಗಳನ್ನು ಮಾಡಬೇಕು. ಆಮೇಲೆ ಮಣ್ಣಿನ ಗುಣವನ್ನು ಅನುಸರಿಸಿಕೊಂಡು ಮೊದಲು ನೀರು ಹಾಯಿಸಿ ಆಮೇಲೆ ನಾಟಿಮಾಡಬಹುದು. ಅಥವಾ

ಮೊದಲು ನೆಟ್ಟು ಆಮೇಲೆ ನೀರು ಹಾಯಿಸಲೂಬಹುದು. ಎರಡರಲ್ಲಿ ಯಾವ ಕ್ರಮವನ್ನಾದರೂ ಅನುಸರಿಸಬಹುದು. ನೆಡುವದರಲ್ಲಿಯೂ ಎರಡು ಕ್ರಮಗಳಿವೆ.

(೧) **ಪ್ಲಾಟ್ ಪ್ಲ್ಯಾಂಟಿಂಗ :—** ಮರದ ನೇಗಿಲಿನಿಂದ ೮೦ ರಿಂದ ೧೦೦ ಸೆಂ. ಮೀ. ಅಂತರದಲ್ಲಿ ಸಾಲುಗಳನ್ನು ತೆಗೆದು ಬಿತ್ತನೆಯ ತುಂಡುಗಳನ್ನು ಒಂದರ ಹಿಂದೆ ಒಂದರಂತೆ ಇಟ್ಟು ಮಣ್ಣಿನಿಂದ ಮುಚ್ಚಬೇಕು. ೨ ರಿಂದ ೩ ಅಂಗುಲ ಮಣ್ಣು ಬೀಳಬಹುದು. ಆಮೇಲೆ ಭಾರವಾದ ಮರದ ದಿಂಡನ್ನು (ಕೊರಡ) ಅದರ ಮೇಲೆ ನಡೆಸಬೇಕು.

(೨) **ಸಾಲಿನಲ್ಲಿ ನಾಟಿ :—** ರಿಡ್ಜರ್ ಸಹಾಯದಿಂದ ೨½–೩ ಅಡಿ ಅಂತರದಲ್ಲಿ ಸಾಲುಗಳನ್ನು ಮಾಡಬೇಕು. ಆಳ ೧೫ ಸೆ. ಮೀ.ಗಳಾಗಬಹುದು. ಸಾಲಿನ ಅಂಚಿನಲ್ಲಿ ಬಿತ್ತನೆಯ ತುಂಡುಗಳನ್ನು ಒಂದಕ್ಕೆ ತಾಗಿ ಮತ್ತೊಂದನ್ನು ಇಟ್ಟು ಮಣ್ಣು ಮುಚ್ಚಬೇಕು.

ಗಮನದಲ್ಲಿಡಬೇಕಾದ ವಿಚಾರವೆಂದರೆ — ಬಹಳ ಆಳವಾಗಿ ನೆಡಬಾರದು. ೩ ರಲ್ಲಿ ೨ ಕಣ್ಣುಗಳಾದರೂ ಬದಿಗಿರುವಂತೆ ನೋಡುವದು ಅಗತ್ಯ. ಇನ್ನು ಗೆದ್ದಲಿನ ಬಾಧೆ ಇರುವ ಜಮೀನಾದರೆ ನೆಡುವದಕ್ಕಿಂತ ಮುಂಚೆ ಪ್ರತಿ ಎಕರೆಗೆ ೧೦ ಕಿ. ಗ್ರಾಂ. ಹೆಪ್ಟಾಕ್ಲೋರ್ ೬% ಅಥವಾ ಕ್ಲೊರ್‌ಡೇನ್ ೫% ೧೨ ಕಿ. ಗ್ರಾಂ. ಅಥವಾ ಅಲ್ಡ್ರಿನ್ ೫% ೧೨ ಕಿ. ಗ್ರಾಂ. ಹಾಕಬೇಕಾಗುತ್ತದೆ. ಗೊಣ್ಣೆ ಹುಳದ ಬಾಧೆ ಇದ್ದಲ್ಲಿ ಕಾರ್ಬೋಫ್ಯೂರೋನ ೩% ಹರಳು ೧೦ ಕಿ. ಗ್ರಾಂ. ಅಥವಾ

ಪೋರೇಟ್ ೧೦% ಹರಳು ೮ ಕಿ. ಗ್ರಾಂ. ಅಥವಾ ಡೈ ಸಲ್ಪೋಟಾನ್ ೫% ನ್ನು ೧೨ ಕಿ. ಗ್ರಾಂ. ಹಾಕಬೇಕಾಗುತ್ತದೆ. ಹಾಗೆಯೇ ಕೊಡಬೇಕಾದ ಗೊಬ್ಬರದಲ್ಲಿ ಶೇಕಡಾ ೧೦ ರಷ್ಟು ಸಾರಜನಕ ಎಲ್ಲಾ ರಂಜಕ ಮತ್ತು ಪೊಟ್ಯಾಶಗಳನ್ನು ನೆಡುವ ಮುಂಚೆ ಜಮೀನಿಗೆ ಕೊಡಬೇಕು. ಕಬ್ಬಿನ ತುಂಡು ತಯಾರಾದ ೨೪ ತಾಸಿನಿಂದ ೭೨ ತಾಸುಗಳ ಒಳಗೆ ನೆಡುವ ಕೆಲಸ ಮಾಡಿದರೆ ಅನುಕೂಲ. ಹೆಚ್ಚು ಮೊಳಕೆ ಶೀಘ್ರದಲ್ಲಿ ಒಡೆಯಲು ಸಾಧ್ಯ ವಾಗುತ್ತದೆ. ಇಲ್ಲದಿದ್ದಲ್ಲಿ ಒಣಗಿ ತೊಂದರೆಯಾಗುತ್ತದೆ.

ಗೊಬ್ಬರ ಕೊಡುವದು :

ಈ ಬೆಳೆ ಹೆಚ್ಚು ಆಹಾರಾಂಶಗಳನ್ನು ಉಪಯೋಗಿಸಿ ಕೊಂಡು ಬೆಳೆಯುವ ಬೆಳೆಯಾಗಿದೆ. ೭೦ ಟನ್ ಇಳುವರಿ ಕೊಡ ಬೇಕಾದಲ್ಲಿ ೯೦ ರಿಂದ ೧೧೫ ಕಿ. ಗ್ರಾಂ. ಸಾರಜನಕ ೧೮೦ ರಿಂದ ೩೩೦ ಕಿ. ಗ್ರಾಂ. ರಂಜಕ ಹಾಗೂ ೬೦ ರಿಂದ ೧೯೦ ಕಿ. ಗ್ರಾಂ. ಪೊಟ್ಯಾಶ ಆಗತ್ಯ. ೭೦ ರಿಂದ ೮೦ ಕಿ. ಗ್ರಾಂ. ಕ್ಯಾಲ್ಸಿಯಂ ಕೂಡಾ ಬೇಕಾಗುತ್ತದೆ. ಗೊಬ್ಬರಗಳನ್ನೆಲ್ಲಾ ಒಂದೇ ಸಲ ಕೊಟ್ಟು ಪೂರೈಸುವ ಹಾಗಿಲ್ಲ. ಬಹಳಷ್ಟು ಪರಿಶೋಧನೆಗಳು ನಡೆದ ಮೇಲೆ ಬೇರೆ ಬೇರೆ ಭಾಗಗಳಿಗೆ ತಕ್ಕ ಸಲಹೆಯನ್ನು ಮಾಡಿರುತ್ತಾರೆ.

ಪ್ರದೇಶ	ಸಾರಜನಕ	ರಂಜಕ	ಪೊಟ್ಯಾಶ್
ಮಂಡ್ಯ ಭಾಗ	೧೦೦ ಕಿ.ಗ್ರಾಂ.	೪೦ ಕಿ.ಗ್ರಾಂ.	೫೦ ಕಿ.ಗ್ರಾಂ.
ಬೆಳಗಾಂವ	೧೨೦ ,,	೩೦ ,,	೭೫ ,,
ತುಂಗಭದ್ರಾ ಹಾಗೂ ಭದ್ರಾ	೧೦೦ ,,	೩೦ ,,	೩೦ ,,
ಹೆಚ್ಚು ಮಳೆ ಬೀಳುವ ಪ್ರದೇಶಗಳು	೭೫ ,,	೫೦ ,,	೫೦ ,,

ಹಟ್ಟಿಗೊಬ್ಬರ, ಕಾಂಪೊಷ್ಟು, ಹಸಿರೆಲೆ ಗೊಬ್ಬರಗಳಲ್ಲದೆ ಮೇಲೆ ತೋರಿಸಿದ ಗೊಬ್ಬರಗಳನ್ನು ಕೊಡುವದು ಅಗತ್ಯ. ಎಲ್ಲ ಗೊಬ್ಬರಗಳನ್ನು ಒಂದೇ ಸಲ ಕೊಡಬಾರದು. ಹಾಗೆ ಕೊಟ್ಟಲ್ಲಿ ಸರಿಯಾದ ಫಲಿತಾಂಶ ಸಿಗುವದಿಲ್ಲ. ಹೀಗಾಗಿ ಪರಿಶೋಧನೆಗಳ ಫಲಿತಾಂಶವಾಗಿ ಬಂದಂತಹ ಸಲಹೆಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಕಬ್ಬಿನ ಬೆಳವಣಿಗೆಯಲ್ಲಿ ೪ ವಿಶಿಷ್ಟತೆಗಳನ್ನು ಕಾಣಬಹುದು: (೧) ಮೊಳಕೆಯೊಡೆಯುವದು (೨) ತೆಂಡೆ ಹೊಡೆಯುವದು (೩) ಬೆಳವಣಿಗೆ (growth) ಮತ್ತು (೪) ಮಾಗುವದು ಈ ವಿಭಾಗಗಳನ್ನು ನೆನಪಿನಲ್ಲಿಟ್ಟುಕೊಂಡು ಗೊಬ್ಬರ ಕೊಡುವ ಕೆಲಸ ಮಾಡಿದರೆ ನಮ್ಮ ಉದ್ದೇಶ ಸಫಲ ವಾಗುತ್ತದೆ. ಯಾವ ಗೊಬ್ಬರ ಕೊಡುವದಾದರೂ ಕಬ್ಬಿನ

ನಿಜವಾದ ಬೆಳವಣಿಗೆ ಅಥವಾ (grand growth period) ಪ್ರಾರಂಭವಾಗುವದರ ಮುಂಚೆ ಮುಗಿಯಬೇಕು. ಅಂದರೆ ೧೪ ವಾರಗಳಲ್ಲಿ ಮುಗಿದಿರಲೇ ಬೇಕು. ವಿವರಿಸಿ ಹೇಳಬೇಕಾದರೆ ಮೊಳಕೆಯೊಡೆಯುವ ೬ ವಾರಗಳ ವರೆಗೂ ತೆಂಡೆ ಹೊಡೆಯುವದು ಮತ್ತು ಬೆಳವಣಿಗೆ ೧೪ ವಾರಗಳಿಂದ ೧೦ ತಿಂಗಳ ವರೆಗೂ ನಡೆದು ಆಮೇಲೆ ೨ ತಿಂಗಳುಗಳ ವರೆಗೆ ಮಾಗುವದು ಇರುತ್ತದೆ. ನಿಜವಾದ ಬೆಳವಣಿಗೆ ಪ್ರಾರಂಭವಾದ ಮೇಲೆ ಕೊಡುವ ಗೊಬ್ಬರ, ನೀರು; ಕಬ್ಬು ಅಥವಾ ತಡವಾಗಿ ಬರುವ ತೆಂಡೆಗಳ ಉಪಯೊಗಕ್ಕೆ ಆದ ಹಾಗೆ ಆಗುತ್ತದೆ. ಹೀಗಿರುವದರಿಂದ ಗೊಬ್ಬರ ಕೊಡುವ ಕೆಲಸ ಎಕಸಾಲಿ ಬೆಳೆಗೆ ಅಂದರೆ ೧೨ ತಿಂಗಳ ಬೆಳೆಗೆ ೩½ ತಿಂಗಳಲ್ಲಿಯೂ ಅಡಸಾಲಿ ಅಂದರೆ ೧೮ ತಿಂಗಳ ಬೆಳೆಯಾದರೆ ೫½–೬ ತಿಂಗಳಿನ ಒಳಗೆ ಮುಗಿಯಲೇ ಬೇಕು. ಇದನ್ನು ಸಹ ಒಂದೇ ಸಲ ಕೊಟ್ಟು ಕೆಲಸ ಮುಗಿಸಿದರಾಯಿತು ಎನ್ನುವಹಾಗಿಲ್ಲ. ಮಾನವರಾದ ನಾವು ನಮಗೆ ಬೇಕಾದಾಗ ಬೇಕಾದಷ್ಟು ಆಹಾರವನ್ನು ತೆಗೆದುಕೊಳ್ಳುವ ಹಾಗೆ ಕಬ್ಬಿಗೂ ಕೂಡಾ ನಾವು ಅದರ ಬೆಳವಣಿಗೆಯ ಕ್ರಮವನ್ನೂ ಅನುಸರಿಸ ಬೇಕಾಗುತ್ತದೆ. ಈ ರೀತಿ ಹಂತ ಹಂತವಾಗಿ ಕೊಡುವದರಿಂದ ಸಸಿಗಳಿಗೆ ಬೇಕಾದಾಗ ಆಹಾರಾಂಶ ಒದಗಿಸಿದ ಹಾಗೆ ಆಗುತ್ತದೆ. ಅಲ್ಲದೆ ಯಾವುದೇ ಕಾರಣದಿಂದ ಪೋಲಾಗುವದು ಕೂಡಾ ಕಡಿಮೆಯಾಗುತ್ತದೆ. ಮುಖ್ಯವಾಗಿ ಸಾರಜನಕ ಯುಕ್ತ ಗೊಬ್ಬರಗಳು (೧) ಹರಿದುಹೋಗುವದರಿಂದ (೨) ಮರಳು ಮಿಶ್ರಿತ ಮಣ್ಣಿನಲ್ಲಿ ಇಂಗಿ ಹೋಗುವದರಿಂದ (೩) ಯೂರಿಯಾ ಗೊಬ್ಬರವನ್ನು ಮಣ್ಣಿನ ಮೇಲಿರಿಸಿದಾಗ ಸ್ವಲ್ಪ ಭಾಗ

ಅಮೋನಿಯಾ ಸಾರಜನಕವಾಗಿ ರೂಪಾಂತರ ಹೊಂದಿ ಆವಿಯಾಗುವದು. (೪) ನೈಟ್ರೇಟರಹಿತವಾಗುವದು. ಈ ರೀತಿ ಆಗುವದನ್ನು ತಪ್ಪಿಸುವಂತೆ ಮಾಡಲು ಮತ್ತು ಬೆಳೆಗೆ ಬೇಕಾದಾಗ ಬೇಕಾದಷ್ಟು ಆಹಾರವನ್ನು ಕೊಡುವುದು ಮಾಡಿದಂತಾಗುತ್ತದೆ. ಹೀಗಾಗಿ ಪರಿಶೋಧನೆಗಳ ಸಲಹೆಯಂತೆ ಮಾಡುವದು ಅಗತ್ಯ. ಇನ್ನು ಈ ರೀತಿ ಏಕೆ ಮಾಡಬೇಕು ಎಂಬುದನ್ನು ನೋಡೋಣ; ಕಬ್ಬಿನ ತುಂಡು ನಾಟಿ ಮಾಡಿದ ನಂತರ ಮೊಳಕೆ ಬರುವದು ಮುಗಿಯುವ ವರೆಗೆ ಎಂದರೆ ೪೫ ದಿನಗಳು ಬೇಕು. ಅಷ್ಟರ ವರೆಗೆ ಹೊರಗಿನ ಆಹಾರದ ಅವಶ್ಯಕತೆ ಹೆಚ್ಚಿಲ್ಲ. ಯಾಕೆಂದರೆ ಕಬ್ಬಿನ ತುಂಡಿನಲ್ಲಿಯೇ ಅದಕ್ಕೆ ಬೇಕಾದ ಆಹಾರ ಶೇಖರವಾಗಿರುತ್ತದೆ. ಹೀಗಾಗಿರುವದರಿಂದ ಆ ಸಮಯದಲ್ಲಿ ಅಂದರೆ ೪೫ ದಿನಗಳ ವರೆಗೆ ರಸಾಯನಿಕ ಗೊಬ್ಬರವನ್ನು ಹಾಕುವ ಪ್ರಮೇಯವಿಲ್ಲ. ಆದಕ್ಕೆ ಒಂದು ಸಲಹೆಯೆಂದರೆ ಶೇಕಡಾ ೧೦ ರಷ್ಟು ಸಾರಜನಕ. ಪೂರಾ ರಂಜಕ ಮತ್ತು ಪೊಟ್ಯಾಶ ಗೊಬ್ಬರಗಳನ್ನು ನಾಟಿ ಮಾಡುವ ಪೂರ್ವದಲ್ಲಿಯೇ ಕೊಡಬೇಕು. ಪೊಟ್ಯಾಶ ಮತ್ತು ರಂಜಕ ಯುಕ್ತ ಗೊಬ್ಬರಗಳು ಜಮೀನಿನಲ್ಲಿ ಮಣ್ಣಿನೊಡನೆ ಸೇರಿ ಬೆಳೆಗಳಿಗೆ ಸಿಗುವಂತಾಗಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಆ ರೀತಿಯ ಅವಕಾಶವನ್ನು ಒದಗಿಸಬೇಕಾದರೆ ಆವೆರಡೂ ಗೊಬ್ಬರಗಳನ್ನು ಮುಂಚಿತವಾಗಿಯೇ ಹಾಕಬೇಕಾಗುತ್ತದೆ. ಇನ್ನು ಪ್ರಾರಂಭದಲ್ಲಿ ಮೇಲೆ ವಿವರಿಸಿದಂತೆ ಸಾರಜನಕ ಬೇಕಾಗಿರದಿದ್ದರೂ ಬೇರುಗಳು ಹೊರಗೆ ಬಂದೊಡನೆ ಸ್ವಲ್ಪ ಆಹಾರ ಬೇಕಾಗುತ್ತದೆ. ಇದನ್ನು ಒದಗಿಸುವದೇ ೧೦% ಸಾರಜನಕ

ಕೊಡುವದಿರುತ್ತದೆ. ಇನ್ನು ಮೊದಲನೆಯ ಮೇಲು ಗೊಬ್ಬರ ೬ ವಾರಗಳಾದ ಮೇಲೆ ಅಂದರೆ ಮೊಳಕೆ ಒಡೆಯುವದು ಮುಗಿದ ಮೇಲೆ ೨೦% ರಷ್ಟು ಪ್ರಮಾಣದಲ್ಲಿ ಕೊಡಬೇಕು. ಯಾಕೆಂದರೆ ಆ ಸಮಯದಲ್ಲಿ ಮರಿಯೊಡೆಯುವದು ಅಥವಾ ತೆಂಡೆಯೊಡೆಯುವದು ಪ್ರಾರಂಭವಾಗುತ್ತದೆ. ಸಸಿಗಳು ಬೆಳೆದಿರುತ್ತವೆ. ಹೀಗಾಗಿ ಹೆಚ್ಚಿನ ಆಹಾರಾಂಶ ಬೇಕಾಗುತ್ತದೆ. ಇದರಿಂದಾಗಿ ೨೦% ಸಾರಜನಕ ಆಗ ಕೊಡಬೇಕಾಗುತ್ತದೆ, ಆಮೇಲೆ ೧೦ನೇ ವಾರದಲ್ಲಿ ೩೦%ರಷ್ಟು ಸಾರಜನಕವನ್ನು ಕೊಡಬೇಕು. ಏಕೆಂದರೆ ಆಗ ಬೆಳೆ ಇನ್ನೂ ಬೆಳೆದಿರುತ್ತದೆ. ಹಾಗೂ ತೆಂಡೆಗಳೂ ಬೆಳೆದಿರುತ್ತವೆ. ಆದ್ದರಿಂದ ಇನ್ನೂ ಹೆಚ್ಚಿನ ಆಹಾರ ಕೊಡಲೇ ಬೇಕಾಗುತ್ತದೆ. ಹಾಗು ಉಳಿದ ೪೦% ರಷ್ಟು ಸಾರಜನಕವನ್ನು ೧೪ನೇ ವಾರದಲ್ಲಿ ಅಂದರೆ ಕೊನೆಯ ಮೇಲು ಗೊಬ್ಬರವನ್ನು ಕೊಡಬೇಕು. ಈ ರೀತಿ ಮಾಡುವದರಿಂದ ಗೊಬ್ಬರ ಪೋಲಾಗುವದನ್ನು ತಪ್ಪಿಸಿದಂತೆ ಹಾಗು ಬೆಳೆಗೆ ಬೇಕಾದಾಗ ಆಹಾರಾಂಶ ಒದಗಿಸಿದಂತೆ ಆಗುತ್ತದೆ. ಪ್ರತಿ ಸಲ ಗೊಬ್ಬರ ಕೊಟ್ಟೊಡನೆಯೇ ನೀರು ಹಾಯಿಸುವದು ಹಾಗೂ ಮಣ್ಣು ಏರಿಸುವದು ಅಗತ್ಯ. ಇದರಿಂದ ಬೆಳೆಯುವ ಸಸಿಗಾಗಿ ಒಂದಿಷ್ಟು ಆಧಾರವಾದ ಹಾಗೂ Early shoot borer ನಿವಾರಣೋಪಾಯ ಕೈಕೊಂಡ ಹಾಗೆ ಆಗುವದು. ೧೪ ವಾರಗಳ ನಂತರ ೧೨ ತಿಂಗಳ ಬೆಳೆಗೆ ಗೊಬ್ಬರ ಕೊಡಬಾರದು. ಅನಂತರ ಕೊಟ್ಟರೆ ಏನಾಗುವದೆಂಬುದನ್ನು ಈಗಾಗಲೇ ಹೇಳಿದೆ. ಇಲ್ಲಿ ನೆನಪಿಟ್ಟು ಕೊಳ್ಳಬೇಕಾದ ವಿಷಯವೆಂದರೆ ಮಣ್ಣು ಪರೀಕ್ಷೆ ಮಾಡಿಸಿ ದೊರಕಿದಂತಹ ಫಲಿತಾಂಶ ಹಾಗೂ ಸಲಹೆಯನ್ನೇ ನೋಡಿ

ಗೊಬ್ಬರ ಕೊಟ್ಟರೆ ಮಿತವ್ಯಯ ಸಾಧಿಸಿದ ಹಾಗೆಯೂ ಬೇಕಾದಷ್ಟೇ ಗೊಬ್ಬರ ಕೊಟ್ಟಂತೆಯೂ ಆಗುತ್ತದೆ.

ಇದಲ್ಲದೆ ಸಾರಜನಕಯುಕ್ತ ಗೊಬ್ಬರ ಕೊಡುವದು ಸರ್ವಸಾಧಾರಣವಾದ ವಿಷಯ. ಆದರೆ ರಂಜಕಯುಕ್ತ ಮತ್ತು ಪೊಟ್ಯಾಶಗಳನ್ನು ಮಾತ್ರ ಉಪಯೋಗಿಸುವದರಲ್ಲಿ ಒಂದಿಷ್ಟು ಹಿಂದೇಟು ಹಾಕುತ್ತಾರೆ. ಈ ರೀತಿ ಮಾಡುವದು ಸರಿಯಲ್ಲ. ಸಮತೋಲನವಾಗಿ ಗೊಬ್ಬರ ಕೊಟ್ಟರೆ ಮಾತ್ರ ಸರಿಯಾದ ಪ್ರತಿಫಲ ಸಿಗುವದು ಸಾಧ್ಯ. ರಂಜಕಾಂಶ ಮತ್ತು ಪೊಟ್ಯಾಶಗಳ ಉಳಿಕೆಯಿಂದ ಆಗುವ ಪರಿಣಾಮ ನಮ್ಮ ಕಣ್ಣಿಗೆ ಕೂಡಲೇ ಕಾಣಲು ಸಿಗದಿದ್ದರೂ ಸಕ್ಕರೆ ತಯಾರಾಗುವಾಗ ಅದರ ಪರಿಣಾಮ ಕಂಡುಬರುತ್ತದೆ. ಸಾರಜನಕ ಮಾತ್ರ ಹಾಗಲ್ಲ. ಜಮೀನಿಗೆ ಸೇರಿಸಿದೊಡನೆಯೇ ಬೆಳವಣಿಗೆಯ ಮೇಲೆ ಪರಿಣಾಮವಾಗಿ ಬೆಳೆಯ ಒಳ್ಳೆಯ ಪರಿಣಾಮ ಕಣ್ಣಿಗೆ ಕಾಣುತ್ತದೆ. ಇದನ್ನು ನೋಡಿಯೇ ಆ ಉಳಿದೆರಡು ಆಹಾರಾಂಶಗಳು ಇಲ್ಲದಿದ್ದರೂ ನಡೆಯುತ್ತದೆ ಎಂದು ತಿಳಿದುಕೊಳ್ಳುವದು ತಪ್ಪು. ಬೆಲ್ಲ ಸರಿಯಾದ ರೀತಿಯಲ್ಲಿ ತಯಾರಾಗಬೇಕಾದರೆ ಹಾಗು ಸಕ್ಕರೆ ಹೆಚ್ಚು ಪ್ರಮಾಣದಲ್ಲಿ ಬರಬೇಕಾದರೆ ಪೊಟ್ಯಾಶ ಮತ್ತು ರಂಜಕಾಂಶಗಳು ಅತೀ ಅಗತ್ಯ. ರಂಜಕಾಂಶವು ಬೇರುಗಳ ನಿರ್ಮಾಣ ಹಾಗೂ ಬೆಳವಣಿಗೆಗೆ ನೇರವಾಗಿ ತಳಿ ದೃಢವಾಗಿ ಬೆಳೆಯುವಂತೆಯೂ ಬೆಳೆ ಬೇಗನೇ ಮಾಗಲು ಸಹಾಯವೂ ಆಗುತ್ತದೆ. ಹಾಗೆಯೇ ಪೊಟ್ಯಾಶ ಇತರ ಕೆಲವೊಂದು ಪ್ರಯೋಜನಗಳೊಡನೆ ಪಿಂದ, ಹರಿತ್ತು, ಮುಂತಾದವುಗಳ ಭಾಗವಾಗಿದ್ದು ಕಿರಣಜನ್ಯ ಸಂಯೋಗ

ಕ್ರಿಯೆಗೆ ಸಹಾಯ ಮಾಡಿ ಪೈರಿಗೆ ಬಿರುಸುತನ ಒದಗಿಸುವದು. ಹಾಗೂ ಸಕ್ಕರೆ ನಿರ್ಮಾಣ, ಸಾಗಾಟಕ್ಕೆ ನೆರವಾಗುವದರಿಂದ ಈ ಎರಡು ಆಹಾರಾಂಶಗಳನ್ನು ಉಪಯೋಗಿಸವದು ಅತೀ ಅಗತ್ಯ. ಜಮೀನಿನ ಫಲವತ್ತತೆಯನ್ನು ನೋಡಿಕೊಂಡು, ಕಾಪಾಡಿಕೊಂಡು ಬರುವದು ಕೂಡಾ ಅತೀ ಅಗತ್ಯ. ಹೀಗಾಗಿ ಎಲ್ಲ ಸಲಹೆ ಮಾಡಿದ ಗೊಬ್ಬರಗಳನ್ನು ಸಕಾಲದಲ್ಲಿ ಒದಗಿಸಿ ಕೊಡುವದು ಅತೀ ಅಗತ್ಯ. ಇದೆಲ್ಲವನ್ನು ಮರೆತು ಸಾರಜನಕ ವನ್ನು ಮಾತ್ರ ಕೊಟ್ಟರೆ ಬೆಳೆಯುವದು ಕಬ್ಬಲ್ಲ, ಬಂಬು ಎಂದೇ ಹೇಳಬೇಕಾಗುತ್ತದೆ. ಯಾಕೆಂದರೆ ಇದರಲ್ಲಿ ಸಕ್ಕರೆ ಅಂಶ ಅತೀ ಕಡಿಮೆ ಪ್ರಮಾಣದಲ್ಲಿರುತ್ತದೆ. ಈ ವಿಚಾರವನ್ನು ತಿಳಿದು ನಾವು ಸರಿಯಾದ ಕ್ರಮಕ್ಕೈಕೊಳ್ಳುವದು ಅತೀ ಅಗತ್ಯವಾಗಿದೆ.

ತೆಂಡೆ ಹೊಡೆಯುವದು :

ಕಬ್ಬಿನ ಬೆಳವಣಿಗೆಯಲ್ಲಿ ಇದು ಒಂದು ಮುಖ್ಯವಾದ ಅಂಶ ಅಥವಾ ಹಂತವೆನ್ನಬಹುದು. ಉಷ್ಣಾಂಶ, ಗೊಬ್ಬರ, ಬೆಳಕು, ತೇವಾಂಶ ಇವುಗಳು ತೆಂಡೆ ಹೊಡೆಯುವದರ ಮೇಲೆ ಪ್ರಭಾವವನ್ನು ಬೀರುತ್ತವೆ. ಇಲ್ಲಿ ನೆನಪಿಡಬೇಕಾದ ವಿಷಯ ವೇನೆಂದರೆ: ಹೊರ ಬಂದ ಎಲ್ಲಾ ತೆಂಡೆಗಳು ಉಪಯುಕ್ತ ವಾಗುವದಿಲ್ಲ. ನೆಟ್ಟ ತಾಯಿ ಕಬ್ಬು ಇದರಿಂದ ಬಂದಂತಹ ತೆಂಡೆಗಳು ಮಾತ್ರ ಚನ್ನಾಗಿ ಬೆಳೆದು ಉತ್ತಮ ಫಲ ನೀಡುತ್ತವೆ. ಆಮೇಲೆ ಬಂದಂತವುಗಳು ಮಾತ್ರ ತಾಯಿ ಕಬ್ಬಿನ ಜೊತೆಯಲ್ಲಿ ಹಾಗೂ ಪ್ರಾರಂಭದ ತೆಂಡೆಗಳೊಂದಿಗೆ ಆಹಾರವನ್ನು ಉಪ-ಯೋಗಿಸುವುದರಲ್ಲಿ ಸರಿ ಸಾಟಿಯಾಗುವುದಿಲ್ಲ. ಹೀಗಾಗಿ

ಬೇರುಗಳು ಆಳವಾಗಿ ಹೋಗುವದಿಲ್ಲ. ಆಹಾರ ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತದೆ ಮತ್ತು ಬೆಳವಣಿಗೆ ಕುಂಠಿತವಾಗುತ್ತದೆ. ಇಂತಹ ತೆಂಡೆಗಳಲ್ಲಿ ರಸದ ಗುಣಮಟ್ಟವೂ ಉತ್ಕೃಷ್ಟವಾಗಿರುವದಿಲ್ಲ. ಹಾಗೆಯೇ ತೆಂಡೆ ಹೊರಡಬೇಕಾದ ಸಮಯದಲ್ಲಿ ನೀರಿನ ಕೊರತೆ ಇದ್ದರೆ ಅದು ಸಹ ದುಷ್ಪರಿಣಾಮ ಬೀರಿ ಇಳುವರಿ ಕಡಿಮೆಯಾಗುತ್ತದೆ. ಉತ್ತಮ ಬೇಸಾಯ ಮಾಡಿ ಗೊಬ್ಬರ ಬೇಡಿಕೆ ಹಾಗೂ ನೀರಿನ ಪೂರೈಕೆ ಸಮರ್ಪಕವಾಗಿದ್ದಲ್ಲಿ ಉತ್ತಮ ಸಂಖ್ಯೆಯಲ್ಲಿ ಪ್ರಾರಂಭದಲ್ಲಿಯೇ ತೆಂಡೆಗಳು ಬಂದು ಇಳುವರಿ ಹೆಚ್ಚಲು ಸಹಾಯವಾಗುತ್ತದೆ.

ಅಂತರ ಬೇಸಾಯ :

ಕುಂಟೆ ಹೊಡೆಯುವದನ್ನು ೬ ವಾರಗಳ ನಂತರ ಕೆಲವು ಬಾರಿ ಮಾಡಬೇಕಾಗುತ್ತದೆ, ಇದರಿಂದಾಗಿ ಮಣ್ಣಿನಲ್ಲಿ ಗಾಳಿ ಚಲನೆಗೆ, ಕಬ್ಬಿನ ಬೇರಿಗೆ ಹಿಡಿತ, ಗಿಡಕ್ಕೆ ರಕ್ಷಣೆ ಇವೆಲ್ಲ ಮಣ್ಣೇರಿಸುವದರಿಂದ ಆಗುತ್ತದೆ. ೧೦ ವಾರಗಳ ಹಾಗೂ ೧೪ ವಾರಗಳ ನಂತರ ಪುನಃ ಇದೇ ರೀತಿ ಮಾಡಬೇಕು. ಅಂದರೆ ಪ್ರತಿ ಸಲ ಮೇಲು ಗೊಬ್ಬರ ಕೊಟ್ಟೊಡನೆಯೇ ಇದು ಜರುಗಬೇಕು. ೧೪ ನೇ ವಾರವಾದ ಮೇಲೆ ಮಣ್ಣೇರಿಸುವದು ಕೊನೆಯದು. ಈ ರೀತಿ ಮಾಡಿದರೆ ಕಬ್ಬಿನ ಬೆಳೆಯು ಬಾಗಿ ಬೀಳುವದನ್ನು ತಪ್ಪಿಸಿದಂತೆ ಆಗುವದು. ಬೀಳದಂತೆ ವಿಶೇಷ ಎಚ್ಚರಿಕೆ ವಹಿಸಬೇಕಾಗುತ್ತದೆ. ಯಾಕೆಂದರೆ, ಕಬ್ಬು ಬಿದ್ದರೆ (Lodge ಆದರೆ) ಎಲ್ಲೆಲ್ಲಿ ಗಂಟುಗಳು ಮಣ್ಣಿಗೆ ತಗಲುತ್ತವೆಯೋ ಆ ಗಂಟುಗಳು ಮೊಳಕೆಯೊಡೆದು ಬಿಡುತ್ತವೆ. ಹಾಗು

ಇದರಿಂದ ಶೇಖರವಾದ ಸಕ್ಕರೆ ಅಂಶ ಮುಂದಿನ ಅದರ ಬೆಳವಣಿಗೆಗೆ ಉಪಯೋಗಿಸಲ್ಪಡುತ್ತದೆ. ಹೀಗಾಗಿ ನಾವು ಕಬ್ಬು ಬೆಳೆಯುವ ಉದ್ದೇಶ ಸಫಲವಾಗುವದಿಲ್ಲ. ಬೆಂಡು ಬಂದಿರುತ್ತದೆ, ಮತ್ತು ಇಳುವರಿ ಕಡಿಮೆಯಾಗುತ್ತದೆ. ಹಾಗು ಬರಬೇಕಾದ ಸಕ್ಕರೆ ಮತ್ತು ಬೆಲ್ಲದ ಉತ್ಪನ್ನವು ಬರುವದಿಲ್ಲ. ಹೀಗಾಗಿ ಕಬ್ಬು ಬೀಳದಂತೆ ತಡೆಗಟ್ಟುವದು ಅತಿ ಅಗತ್ಯ. ಆದರೆ ಬೀಳುವದು ಅದರ ಸ್ವಾಭಾವಿಕ ಗುಣಗಳಲ್ಲಿ ಒಂದು. ಅತೀ ಎತ್ತರಕ್ಕೆ ಬೆಳೆದು ಯಾವ ರೀತಿಯ ಆಸರೆ ಇಲ್ಲದೇ ಇರುವದರಿಂದ ಗಾಳಿ ಜೋರಾಗಿ ಬೀಸಿದಾಗ ಬೀಳುವುದು ಸಹಜ. ತಪ್ಪಿಸಲು ಸಾಧ್ಯವೇ ಇಲ್ಲ. ಆದರೆ ಕಡಿಮೆ ಮಾಡುವದು ಸಾಧ್ಯವಿದೆ. ಮೊದಲು ಸಾಲಿನಲ್ಲಿ ಕಬ್ಬು ಸುಮಾರು ೬–೭ ತಿಂಗಳಾದಾಗ ಗರಿಗಳಿಂದಲೇ ಕಬ್ಬಿನ ಮೆಳೆಗಳನ್ನು ಸುತ್ತು ಹಾಕಬೇಕು. ಆ ಮೇಲೆ ೨ ಸಾಲುಗಳನ್ನು ಸೇರಿಸಿ ಗರಿಗಳಿಂದಲೇ ಕಟ್ಟಬೇಕು. ಅನಂತರ ಸಾಧ್ಯವಿದ್ದಲ್ಲಿ ೪ ಸಾಲುಗಳನ್ನು ಸೇರಿಸಿಯೂ ಕಟ್ಟಬಹುದು. ಈ ರೀತಿ ಮಾಡುವದಕ್ಕೆ "Propping and wrapping" ಎನ್ನುತ್ತಾರೆ. ಇದರಿಂದ ಬೀಳುವುದನ್ನು ತಕ್ಕಮಟ್ಟಿಗೆ ತಡೆಗಟ್ಟಲು ಸಾಧ್ಯವಾಗುತ್ತದೆ. ಬಂಬುಗಳನ್ನು ಮತ್ತು ಸರಿಗೆಗಳನ್ನು (wire) ಉಪಯೋಗಿಸಿ ಹೆಚ್ಚು ಖರ್ಚು ಮಾಡುವದಾದರೆ ಬೀಳುವದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಪ್ರತಿ ಸಲ ಮೇಲೊಗ್ಗೊಬ್ಬರ ಕೊಡುವಾಗ ಮಣ್ಣೇರಿಸುವದರಿಂದ ಕಳೇಗಳನ್ನೂ ಅದೇ ಸಮಯದಲ್ಲಿ ತೆಗೆಯಬಹುದು, ಆದರೆ ಕಬ್ಬಿನಲ್ಲಿ ೩೯ ತಿಂಗಳಾದ ಮೇಲೆ ಇರುವ ಮುಖ್ಯ ಕೆಲಸವೆಂದರೆ ನೀರುಣಿಸುವದು ಮಾತ್ರ.

ನೀರುಣಿಸುವುದು :

೧೨ ರಿಂದ ೧೪ ತಿಂಗಳ ಬೆಳೆಯಾದ ಕಬ್ಬಿಗೆ ೧೧ತ್ತಿಯಿಂದ ೧೩ತ್ತಿ ತಿಂಗಳುಗಳ ವರೆಗೆ ನೀರು ಬೇಕಾಗುತ್ತದೆ. ಒಟ್ಟಿಗೆ ೩೬ ರಿಂದ ೪೦ ಸಲ ನೀರು ಹಾಯಿಸಬೇಕಾಗುತ್ತದೆ. ಮಣ್ಣಿನ ಗುಣ, ಹವಾಮಾನ, ಮಳೆ ಮುಂತಾದವುಗಳನ್ನು ಹೊಂದಿಕೊಂಡು ನೀರುಣಿಸುವವನ್ನು ನಿರ್ಣಯಿಸಬೇಕಾಗುತ್ತದೆ. ಕಬ್ಬು ನೆಟ್ಟು ಮೊಳಕೆ ಬರುವ ವರೆಗೆ ೨-೩ ದಿವಸಕ್ಕೆ ಒಮ್ಮೆ ನೀರು ಹಾಯಿಸಬೇಕಾಗುತ್ತದೆ. ಆಮೇಲೆ ೩-೩ತ್ತಿ ತಿಂಗಳ ವರೆಗೆ ವಾರಕ್ಕೆ ಒಂದು ಸಲ ನೀರು ಹಾಯಿಸಬೇಕಾಗುತ್ತದೆ. ಅನಂತರ ೮-೧೫ ದಿನಗಳಿಗೊಮ್ಮೆ ಕೊಡಬಹುದು. ಆದರೆ ಕಟಾವು ಮಾಡುವ ೧೦-೧೫ ದಿನ ಮುಂಚಿತವಾಗಿ ನೀರುಣಿಸುವದನ್ನು ನಿಲ್ಲಿಸುವದು ಸೂಕ್ತ. ಈ ರೀತಿ ಮಾಡಿ ಕಬ್ಬು ಕಟಾವು ಮಾಡಿದರೆ ಸರಿಯಾಗಿ ಮಾಗುವದರಿಂದ ರಸದ ಪ್ರಮಾಣವು ಸರಿಯಾದ ರೀತಿಯಲ್ಲಿರುತ್ತದೆ. ಕರಿಮಣ್ಣಿನ ಭೂಮಿಯಲ್ಲಿ ಹೆಚ್ಚಿನ ನೀರು ಅಗತ್ಯ. ಹೆಚ್ಚು ಸಮಯ ನೀರು ಬೇಕಾದರೂ ನೀರು ಹೆಚ್ಚು ನಿಲ್ಲುವಂತಾಗಬಾರದು. ಹೆಚ್ಚಿನ ನೀರು ಬಸಿದು ಹೋಗದಿದ್ದರೆ ಬೆಳೆ ಸರಿಯಾಗಿ ಬರುವದಿಲ್ಲ. ಹೀಗಾಗಿ ಕಬ್ಬಿನ ಬೆಳೆ ಬೆಳೆಯಲು ಜಮೀನು ಆಯ್ಕೆ ಮಾಡುವಾಗ ಈ ವಿಷಯವನ್ನು ಗಮನದಲ್ಲಿಟ್ಟು ಕೊಳ್ಳುವದು ಅಗತ್ಯ,

ಕೀಟಗಳು ಹಾಗು ಹತೋಟಿ :

ನೂರಕ್ಕೂ ಮೇಲ್ಪಟ್ಟು ವಿವಿಧ ಕೀಟಗಳು ಅಲ್ಲದೆ ಇಲಿ, ನರಿ, ಗಿಳಿ, ಅಳಿಲು ಹಾಗೂ ದುಂಡು ಜಂತು ಮುಂತಾದವು

ಗಳು ಈ ಬೆಳೆಯನ್ನು ಹಾಳುಮಾಡುತ್ತವೆ. ಪರಿಸ್ಥಿತಿ ಹೀಗಿದ್ದರೂ ನಮ್ಮ ರಾಜ್ಯವನ್ನು ಪರಿಗಣಿಸಿದರೆ ಮುಖ್ಯವಾಗಿ ಕಬ್ಬಿಗೆ ಬೀಳುವ ಕೀಟಗಳೆಂದರೆ,

೧) ಎಳೆಯ ಕಬ್ಬಿನ ಕಾಂಡ ಕೊರೆಯುವ ಹುಳ

೨) ಬೆಳೆದ ಕಬ್ಬಿನ ಕಾಂಡ ಕೊರೆಯುವ ಹುಳ

೩) ಗೊಣ್ಣೆ ಹುಳ

೪) ಗೆದ್ದಲು ಮತ್ತು

೫) ಪೈರಿಲ್ಲಾ

ಈ ಮುಂತಾದವುಗಳು ಮುಖ್ಯವಾದವು. ರಾಜ್ಯದಲ್ಲಿ ವ್ಯವಸಾಯ ಇಲಾಖೆಯ ಕಬ್ಬು ಬೆಳೆ ಅಭಿವೃದ್ಧಿ ಯೋಜನೆಯ ಸಿಬ್ಬಂದಿ ಯವರು ಸಂಗ್ರಹಿಸಿದ ಅಂಕಿ ಅಂಶಗಳ ಫಲಿತಾಂಶವನ್ನು ನೋಡಿದರೆ ಕೀಟಗಳಿಂದಾಗುವ ಬಾಧೆ ಅತಿ ಕಡಿಮೆ ಎನ್ನ ಬೇಕಾಗುತ್ತದೆ. ಅವುಗಳ ವಿಷಯವಾಗಿ ಒಂದೊಂದಾಗಿ ನೋಡೋಣ.

ಅ. ನಂ.	ಕೀಟ	ಹಾನಿಯಿಂದ ಉಂಟಾಗುವ ಉಪದ್ರವಗಳು	ನಿವಾರಣೋಪಾಯ
೧	೨	೩	೪
೧	ಕಾಂಡಕೊರೆಯುವ ಹುಳ (ಎಳೆಯ ಕಬ್ಬಿನ ಮೇಲೆ)	ಹಾನಿಗೀಡಾದ ಕಬ್ಬು ಒಣಗುತ್ತದೆ. ತೆಂಡೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತವೆ. ರಾಜ್ಯದ ಎಲ್ಲಾ ಪ್ರದೇಶದಲ್ಲಿ ಇದರ ಬಾಧೆ ಇದೆ. ತಡವಾಗಿ ನಾಟಿ ಮಾಡಿದ ಕಬ್ಬಿಗೆ ಇದರ ಬಾಧೆ ಹೆಚ್ಚು. ನಡುವಿನಿಂದ ಒಣಗಿದ ಸುಳಿ (Dead heart) ಹೊರಗೆ ಬರುತ್ತದೆ.	ಹಾನಿಗೀಡಾದ ಸಸಿಗಳನ್ನು ಕಿತ್ತು ನಾಶಪಡಿಸುವದು. ಬುಡಕ್ಕೆ ಮಣ್ಣು ಏರಿಸುವದು. ಪರಾವಲಂಬಿ ಜೀವಿಯನ್ನು ಬಿಡುವದು. ಬಿ.ಎಚ್.ಸಿ. ೦·೫ % ಹರಡಿ ಅಥವಾ ೨ % ಎಂಡ್ರಿನ ಹರಳುಗಳನ್ನು ಎಕರೆಗೆ ೬ ಕಿ.ಗ್ರಾಂ.ದಂತೆ ಮಿಶ್ರಮಾಡಿ ಉಪದ್ರವ ತಡೆಯಬಹುದಾಗಿದೆ.

೧	೨	೩	೪
೨	ಕಾಂಡಕೊರೆಯುವ ಹುಳ (ಬೆಳೆದ ಕಬ್ಬಿನ ಮೇಲೆ)	ಬೆಳೆದ ಕಬ್ಬಿನ ಮೇಲೆ ಹಾನಿ ಹೆಚ್ಚು. ಕಬ್ಬಿನ ಬೆಳವಣಿಗೆ ಸ್ಥಗಿತವಾಗಿ ತುದಿಯಲ್ಲಿ ಗೊಂಚಲಾದ ಹಾಗೆ ಕಂಡು ಬರುತ್ತದೆ. ರಸದ ಮಟ್ಟ ಇಳಿಯುತ್ತದೆ. ಎಲೆಗಳಲ್ಲಿ ಅಲ್ಲಲ್ಲಿ ತೂತುಗಳು ಕಂಡು ಬರುತ್ತವೆ.	ಮೊಟ್ಟೆಗಳನ್ನು ಸಂಗ್ರಹಿಸಿ ನಾಶ ಮಾಡುವದು. ಹಾನಿಗೀಡಾದ ತೆಂಡೆಗಳನ್ನು ನಾಶಪಡಿಸುವದು. ನೀರು ಹೆಚ್ಚು ನಿಲ್ಲದೆ ಇಂಗಿ ಹೋಗುವಂತೆ ಮಾಡುವದು.
೩	ಗೊಣ್ಣೆಹುಳು	ಮಣ್ಣಿನಡಿಯಲ್ಲಿ ವಾಸಮಾಡಿ ನಾಟಿ ಮಾಡಿದ ಕಬ್ಬಿನ ತುಂಡು ಹಾಗು ಬೆಳೆದ ಕಬ್ಬಿನ ಬೇರನ್ನು ತಿನ್ನುತ್ತದೆ. ಕಬ್ಬು ಮೊಳಕೆಯೊಡೆದಿರುವದೆಲ್ಲಾ ಒಣಗಿ ಹೋಗುತ್ತದೆ.	೧೦ % ಹೆಪ್ಟಾಕ್ಲೋರ ಅಥವಾ, ೫ % ಅಲ್ಡ್ರಿನ್ ೧೦ ರಿಂದ ೧೫ ಕಿ.ಗ್ರಾಂ.ದಷ್ಟು ನಾಟಿಮಾಡುವ ಕಾಲದಲ್ಲಿ ಮಣ್ಣಿನಲ್ಲಿ ಮಿಶ್ರ ಮಾಡಬೇಕು.

೧	೨	೩	೪
೪ ಗೆದ್ದಲು		ಗೊಣ್ಣೆಹುಳದಂತೆ	೧೦% ಹೆಪ್ಟಾಕ್ಲೋರ ಅಥವಾ, ೫% ಆಲ್ಡ್ರಿನ್ ೧೦ ರಿಂದ ೧೫ ಕಿ. ಗ್ರಾಂ.ದಷ್ಟು ನಾಟಿಮಾಡುವ ಕಾಲದಲ್ಲಿ ಮಣ್ಣಿನಲ್ಲಿ ಮಿಶ್ರ ಮಾಡಬೇಕು.
೫ ಪೈರಿಲ್ಲಾ		ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಬಹಳವಾಗಿ ಹರಡುತ್ತಿರುವ ಕೀಟ, ಚಿಟ್ಟೆಯಂತಹದು. ರಸವನ್ನು ಹೀರಿ ಬೆಲ್ಲ ಮತ್ತು ಸಕ್ಕರೆ ಪ್ರಮಾಣ ಹಾಗು ಇಳುವರಿ ಕಡಿಮೆಯಾಗುತ್ತದೆ.	೫% ಬಿ.ಎಚ್.ಸಿ. ಧೂಳೀಕರಿಸಬೇಕು. ೧೦–೧೫ ಕಿ. ಗ್ರಾಂ. ಪ್ರತಿ ಎಕರೆಗೆ ಬೇಕು.

ರೋಗಗಳು ಹಾಗು ಹತೋಟಿ :

ಹಲವಾರು ತರಹದ ರೋಗಗಳು ಕಬ್ಬಿಗೆ ಬರುತ್ತವೆ. ಈ ಬೆಳೆಗೆ ೧೪೭ ತರಹದ ರೋಗಗಳು ತಗಲುತ್ತವೆಯೆಂದು ವಿಜ್ಞಾನಿಗಳು ತಿಳಿಸಿದ್ದಾರೆ. ನಮ್ಮ ರಾಜ್ಯದ ವಿಷಯದಲ್ಲಿ ಹೇಳುವದಾದರೆ, ಕಾಡಿಗೆರೋಗ, ಅನಾನಸುರೋಗ (ಪೈನಾಪಲ್‌ರೋಗ) ಚುಕ್ಕೆರೋಗ, ಕೆಂಪುಕೊಳೆರೋಗ, ಗ್ರಾಸೀ ಶೋಟ್ ಮತ್ತು ರೆಟೂನ ಸ್ಟಂಟಿಂಗ ರೋಗಗಳು ಮುಖ್ಯವಾಗಿವೆ.

ಅ.ನಂ.	ರೋಗ	ಚಿಹ್ನೆಗಳು	ನಿವಾರಣೋಪಾಯ
೧	ಕಾಡಿಗೆರೋಗ	ಬೆಳೆಯುವ ತುದಿಯಿಂದ ಚಾವಟಿಯಂತಹ ಕಪ್ಪು ರೀತಿಯದಾದ ಒಂದು ಕೋಲು ಹೊರಬರುತ್ತದೆ. ಕೂಳೆ ಬೆಳೆಗೆ ಇದರ ಬಾಧೆ ಹೆಚ್ಚು. ಇಳುವರಿ ಕಡಿಮೆಯಾಗುತ್ತದೆ.	ಬಿತ್ತನೆಯನ್ನು ರೋಗವಿಲ್ಲದ ಕಬ್ಬಿನಿಂದ ಮಾಡುವದು; ರೋಗ ಬಂದ ಕಬ್ಬನ್ನು ಕಿತ್ತು ನಾಶಪಡಿಸುವದು.

೧	೨	೩	೪
೨	ಪೈನಾಪಲ್ ರೋಗ	ಕಬ್ಬಿನ ತುಂಡಿನ ಒಳಭಾಗ ಕೊಳೆತು ಅನಾನಸು ಹಣ್ಣಿನ ಪರಿಮಳ ಬರುತ್ತದೆ. ತುಂಡು ಮೊಳಕೆಯೊಡೆಯುವದಿಲ್ಲ.	ಅಗಲಾಲ್ ಅಥವಾ ಅರೆಟಾನ್ ದ್ರಾವಣದಲ್ಲಿ ಅದ್ದಿ ಕಬ್ಬಿನ ತುಂಡುಗಳನ್ನು ನೆಡುವದು.
೩	ಕೆಂಪು ಕೊಳೆ ರೋಗ	ಕಬ್ಬು ಒಣಗಿ ಬೆಳೆ ಹಾಳಾಗುತ್ತದೆ. ಒಣಗಿದ ಕಬ್ಬಿನ ಒಳಭಾಗ ಕೊಳೆತು ಕೆಂಪು ಬಣ್ಣಕ್ಕೆ ತಿರುಗಿ ವಾಸನೆ ಬರುತ್ತದೆ. ಮೊಳಕೆ ಪ್ರಮಾಣ ಕಡಿಮೆಯಾಗುತ್ತದೆ.	ಒಳ್ಳೆಯ ತಾಕಿನಿಂದ ಬೀಜ ಉಪಯೋಗಿಸುವದು. ರೋಗ ರಹಿತ ಬೀಜ ಉಪಯೋಗಿಸುವದು.
೪	ಗ್ರಾಸೀ ಶೊಟ್ ಅಥವಾ ಹಳದೀರೋಗ	ಕಬ್ಬಿನ ಬೆಳವಣಿಗೆ ಕುಂಠಿತವಾಗಿ ಗರಿಗಳು ಬೆಳೆಯದೇ ಹುಲ್ಲು ಬೆಳೆದ ಹಾಗೆ ಬೆಳೆಯುತ್ತದೆ. ಎಲೆಗಳು ಹಳದೀ ಬಣ್ಣಕ್ಕೆ ತಿರುಗುತ್ತವೆ.	ರೋಗ ಕಂಡ ಮೇಲೆ ನಿವಾರಣೋಪಾಯವಿಲ್ಲ. ಬಿಸಿ ನೀರಿನ ಉಪಚಾರ ಮಾಡಿ ಬೆಳೆದ ಬೆಳೆಯಿಂದ ಬೀಜವನ್ನು ಉಪಯೋಗಿಸುವದು.

೧	೨	೩	೪
೫	ಚುಕ್ಕೆರೋಗ	ಚುಕ್ಕೆಗಳು ಕೆಳಗಿನ ಎಲೆಗಳಿಗೆ ಕಾಣಿಸಿಕೊಳ್ಳುತ್ತವೆ.	ತಾಮ್ರದ ಅಂಶವನ್ನೊಳಗೊಂಡ ಶಿಲೀಂದ್ರ ನಾಶಕವನ್ನು ಉಪಯೋಗಿಸುವುದು.
೬	ರೆಟೊನ ಸ್ಟಂಟಿಂಗ್ ರೋಗ	ನಂಜುರೋಗ ಬೆಳೆ ಸರಿಯಾಗಿ ಬೆಳೆಯದೇ ಕುಂಠಿತವಾಗುತ್ತದೆ.	ಗ್ರಾಸೀಶೊಟ್ ರೋಗಕ್ಕೆ ಹೇಳಿದ ಹಾಗೆ.

ಕೀಟ ಮತ್ತು ರೋಗಗಳ ಬಾಧೆ ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳು :

೧) ರೋಗ ರಹಿತ ಬೀಜದ ತುಂಡನ್ನೇ ಬಿತ್ತನೆಗೆ ಬಳಸಬೇಕು.

೨) ಕಬ್ಬಿನ ಬಿತ್ತನೆಯ ತುಂಡುಗಳನ್ನು ನೀರಿನಲ್ಲಿ ಕರಗುವ ಪಾದರಸಯುಕ್ತಗಳನ್ನು [ಅಗಲಾಲ್ ಅಥವಾ ಅರೆಟಾನ್] ನೀರಿನಲ್ಲಿ ಬೆರೆಸಿ (೩೬ ಗ್ರಾಂ. ರಾಸಾಯನಿಕವನ್ನು ೧೮ ಲೀಟರ ನೀರಿನಲ್ಲಿ) ಬಿತ್ತನೆಗೆ ಮೊದಲು ಅದ್ದಬೇಕು.

೩) ಗೆದ್ದಲು ಹುಳಗಳ ಬಾಧೆಯನ್ನು ತಡೆಗಟ್ಟಲು ಎಕರೆಗೆ ೧೨ ಕಿ. ಗ್ರಾಂ. ಅಲ್ಡ್ರಿನ್ ಅಥವಾ ೧೨ ಕಿ. ಗ್ರಾಂ. ಕ್ಲೋರೆಡೆನ್ ಅಥವಾ ೧೦ ಕಿ. ಗ್ರಾಂ. ಹೆಪ್ಟಾಕ್ಲೋರ್‌ನ್ನು ಸಾಲಿನಲ್ಲಿ ಹಾಕಿ ಆಮೇಲೆ ಬಿತ್ತನೆಯನ್ನು ನಡೆಸಬೇಕು.

೪) ನಾಟಿ ಮಾಡಿದ ೬ ರಿಂದ ೧೦ ವಾರಗಳ ನಂತರ ಎರಡೂ ಬದಿಯಿಂದ ಮಣ್ಣು ಏರಿಸಬೇಕು.

೫) ಸುಳಿ ಒಣಗಿದ ಹಾಗೂ ರೋಗ ತಗಲಿದ ಕಬ್ಬನ್ನು ಬೇರು ಸಹಿತ ಕಿತ್ತು ಸುಟ್ಟು ನಾಶಪಡಿಸಬೇಕು.

೬) ಕಾಡಿಗೆರೋಗ, ನಂಜುರೋಗದ ಬಾಧೆಗೆ ಒಳಪಟ್ಟ ಸಸಿಗಳನ್ನು ನಾಶಪಡಿಸಬೇಕು.

೭) ಒಂದು ತಿಂಗಳ ಬೆಳೆಗೆ ೪೫ ಮಿ. ಲಿ. ಎಂಡ್ರಿನನ್ನು ೧೫ ಲೀಟರ ನೀರಿನಲ್ಲಿ ಬೆರೆಸಿ ಬೆಳೆಗೆ ಸಿಂಪಡಿಸಬೇಕು.

೮) ನಾಟಿಮಾಡಿದ ೮, ೧೨, ೧೬, ೨೦ ವಾರಗಳ ನಂತರ ಮೇಲಿನ ಸಿಂಪರಣೆಯನ್ನೇ ಮುಂದುವರಿಸ ಬೇಕು.

೯) ಅಡಸಾಳಿ ಬೆಳೆ ನಾಟಿಮಾಡಿದ ೮, ೧೨ ವಾರಗಳ ನಂತರ ೪೫ ಮಿ. ಲಿ. ಎಂಡ್ರಿನ್ ಮತ್ತು ೪೦ ಗ್ರಾಂ. ಜೈನೆಬನ್ನು ೧೮ ಲೀಟರ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಕಳೆನಾಶಕ ಮತ್ತು ರಕ್ಷಣೆ :

ವರ್ಷ ಪೂರ್ತಿ ಕಬ್ಬು ಜಮೀನಿನಲ್ಲಿರುವದರಿಂದ ಹಾಗು ನೀರು ಯಾವಾಗಲೂ ಇರುವದರಿಂದ ಉಂಟಾಗುವ ತೇವಾಂಶ ಕಳೆಗಳ ಬೆಳವಣಿಗೆಗೆ ಸಹಾಯವಾಗುತ್ತದೆ. ೨–೪–ಡಿ. ೧ ಕಿ. ಗ್ರಾಂ.ನ್ನು ೬೦–೮೦ ಗ್ಯಾಲನ್ ನೀರಿನಲ್ಲಿ ಮಿಶ್ರಮಾಡಿ ನಾಟಿಮಾಡಿದ ೫ ನೇ ದಿನ ಹಾಗೂ ೨೫ ನೇ ದಿನ ಸಿಂಪಡಿಸಬೇಕು. ಸಿಮೆಜಿನ್ ೫ ಕಿ.ಗ್ರಾಂ. ಅಥವಾ ಡಾಯುರಾನ ೩–೪ ಕಿ.ಗ್ರಾಂ. ನಾಟಿಮಾಡಿದ ೫ ದಿನಗಳೊಳಗೆ ಸಿಂಪಡಿಸಿದರೂ ಕಳೆಯಿಂದ ರಕ್ಷಣೆ ಕೊಟ್ಟಂತಾಗುತ್ತದೆ. ಆಮೇಲೆ ಒಂದೆರಡು ಸಲ ಕಳೆ ತೆಗೆಸಬೇಕು. ೪–೫ ತಿಂಗಳಾದ ಮೇಲೆ ಬೆಳೆಯು ನೆರಳಿನಿಂದಾಗಿ ಕಳೆ ಬೆಳೆಯುವದಿಲ್ಲ.

ಕಟಾವು ಮಾಡುವದು :

ಪೂರ್ಣವಾಗಿ ಬಲಿತ ಕಬ್ಬನ್ನು ಕಟಾವು ಮಾಡಬೇಕು. ಈ ಹಂತವನ್ನು ಮುಟ್ಟಿದೆಯೋ ಎಂದು ತಿಳಿದುಕೊಳ್ಳುವದು ಅಗತ್ಯ. ಸಾಧಾರಣವಾಗಿ ೧೨ ತಿಂಗಳು ಬೆಳವಣಿಗೆ ಆದಮೇಲೆ ಮಾತ್ರ ತಯಾರಾಗಿದೆ ಎಂದು ತಿಳಿಯಬಹುದು. ಇಂತಹ ಕಬ್ಬನ್ನು ಬೆರಳಿನಿಂದ ಹೊಡೆದರೆ ತಮಟೆ ಶಬ್ದ ಬರುತ್ತದೆ. ಕೆಳಗಿನ ಗರಿಗಳು ಒಣಗಿ ಹಳದೀ ಬಣ್ಣಕ್ಕೆ ತಿರುಗುತ್ತವೆ. ಇಂತಹ ಕಬ್ಬಿನಲ್ಲಿ "ಬ್ರಿಕ್ಸ" ಅಂಶ ೧೮ಕ್ಕೆ ಮೇಲ್ಪಟ್ಟು ಇರುತ್ತದೆ. ಕಟಾವು ಮಾಡುವ ೧೦ ದಿನಗಳ ಮುಂಚಿತವಾಗಿ ನೀರುಣಿಸುವದನ್ನು ನಿಲ್ಲಿಸಬೇಕು. ಭೂಮಿಯ ಮಟ್ಟಕ್ಕೆ ಕಬ್ಬು ಕಡಿಯಬೇಕು. ಸೂಲಂಗಿ ಬಿಟ್ಟು ೩–೩೧ ತಿಂಗಳ ಒಳಗೆ ಕಟಾವು ಮಾಡಬೇಕು. ಕಟಾವಾದ ೨೪–೭೨ ಘಂಟೆಗಳ ಒಳಗೆ ರಸ ತೆಗೆಯಬೇಕು.

ಇಳುವರಿ :

೧೨ ನೇ ತಿಂಗಳಲ್ಲಿ ೪೦–೪೫ ಟನ್, ೧೬ ತಿಂಗಳಲ್ಲಿ ೬೦–೮೦ ಟನ್ ಬರುತ್ತದೆ. ಮಲೆನಾಡಿನಲ್ಲಿ ಸ್ವಲ್ಪ ಕಡಿಮೆ ಆಗುವದು.

ಕೂಳೆ ಬೆಳೆಯುವದು :

ಈ ರೀತಿ ಮಾಡುವದರಿಂದ ಬಿತ್ತನೆ ಕಬ್ಬಿಗೆ ಆಗುವ ಖರ್ಚು, ಹಾಗೂ ಪ್ರಾರಂಭಿಕ ಬೇಸಾಯದ ಖರ್ಚು ಉಳಿಯು

ತ್ತದೆ. ೧ ರಿಂದ ೨ ಸಲ ಕೂಳೆ ಬೆಳೆಯಬಹುದು. ಆಮೇಲೆ ತೆಗೆಯಬೇಕಾದರೆ ರೋಗ ಹೆಚ್ಚಾಗಿ ಇಳುವರಿ ಕಡಿಮೆಯಾಗು ತ್ತದೆ. ಹಾಗೆಯೇ ಗುಣಮಟ್ಟವೂ ಹಾಳಾಗುತ್ತದೆ. ಗಾತ್ರ ಸಣ್ಣದಾಗುತ್ತದೆ. ಭೂಮಿಯ ಮಟ್ಟಕ್ಕೆ ಸರಿಯಾಗಿ ಕತ್ತರಿಸಿ ಒಣಗಿದ ಗರಿ ಮತ್ತು ಕಸವನ್ನು ಸುಡಬೇಕು. ಅನಂತರ ನೀರು ಹಾಯಿಸಿ ಬೇಸಾಯ ಮಾಡಿ ಕಳೆ ತೆಗೆದು ಗೊಬ್ಬರ ಕೊಡಬೇಕು. ನಾಟಿ ಮಾಡಿದ ಕಬ್ಬಿಗೆ ಕೊಟ್ಟಷ್ಟು ಗೊಬ್ಬರ ಕೊಡಬೇಕು. ಉತ್ತಮ ಇಳುವರಿ ೧-೧೨ ತಿಂಗಳು ಮುಂಚಿತವಾಗಿಯೇ ಬರುತ್ತದೆ.

ಇಲ್ಲಿಯ ವರೆಗೆ ಕಬ್ಬಿನ ಬೇಸಾಯ ಕುರಿತು ಹೇಳಿದಂತೆ ಆಯಿತು. ಇಷ್ಟನ್ನು ಮಾತ್ರ ತಿಳಿದರೆ ಸಾಲದು. ಸಕ್ಕರೆ ಉತ್ಪಾದನೆ ಮಾಡಬೇಕಾಗುವುದರಿಂದ ಕಾರಖಾನೆಯವರ ಸಹಾಯಬೇಕು. ಹೀಗಾಗಿ ಬೆಳೆಯುವಂತಹ ರೈತರಿಗೂ, ಕಾರಖಾನೆಯವರಿಗೂ ಒಳ್ಳೆಯ ಸಂಬಂಧವಿರಬೇಕು. ಒಬ್ಬರ ಸಹಾಯವಿಲ್ಲದೆ ಮತ್ತೊಬ್ಬರ ಕೆಲಸ ಸುಸೂತ್ರ ಆಗಲಾರದು. ಹೀಗಾಗಿ ಇಬ್ಬರೂ ಸೇರಿ ಒಂದು ಯೋಜನೆ ಮಾಡಿ ಕಾರ್ಯ ರೂಪದಲ್ಲಿ ತಂದರೆ ಮಾತ್ರ ಈ ಕೆಲಸ ಸುಗಮವಾಗಿ ಇಬ್ಬರಿಗೂ ಲಾಭದಾಯಕವಾದೀತು ! ಇಲ್ಲದಿದ್ದರೆ ಇಬ್ಬರಿಗೂ ನಷ್ಟವಾಗುವ ಸಾಧ್ಯತೆ ಹೆಚ್ಚು. ಬೆಳೆಯುವದರ ಜೊತೆಗೆ ಈ ವಿಚಾರವನ್ನು ಕೂಡ ಮನದಲ್ಲಿಡಬೇಕಾದದ್ದು ಅತ್ಯವಶ್ಯವಾಗಿದೆ.

———

ಆಧಾರ

(1) Anonymous 1974
ಅಧಿಕ ಇಳುವರಿಗೆ, ಆಧುನಿಕ ಬೇಸಾಯ ಕ್ರಮಗಳು
ಕೃಷಿ ವಿಶ್ವವಿದ್ಯಾಲಯ ಮತ್ತು ವ್ಯವಸಾಯ ಇಲಾಖೆ, ಬೆಂಗಳೂರ, ಪುಟ 62–66

(2) Anonymous, 1966
"Summer School for sugarcane Scientists"
Sugarcane breeding institute Coimbatore,

(3) ಹುಣಸಿಗಿ ಗುರುರಾಜ, 1973
ಮೈಸೂರು ರಾಜ್ಯದಲ್ಲಿ ಕೃಷಿ (ಕೃಷಿ ಗ್ರಂಥಮಾಲೆ–1)
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–24
ಪುಟ 222–236

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

ಗರತಿಯರ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ —ದೇವೇಂದ್ರಕುಮಾರ ಹಕಾರಿ

ಮಾನವ ಮತ್ತು ಶಾಕಾಹಾರ —ಎ ಎಸ್. ಧರಣೇಂದ್ರಯ್ಯ

ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ —ಎನ್. ಎ. ಪಾಟೀಲ

ಜನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ —ಲೀಲಾವತಿ ತೋರಣಗಟ್ಟಿ

ಜನಪದದಲ್ಲಿ ಮಕ್ಕಳ ಸಾಹಿತ್ಯ —ಸಂಗಮೇಶ ಎಂ. ಬಿರಾದಾರ

ಪ್ರೇಮಚಂದರ ಸಣ್ಣಕತೆಗಳು —ಬಿ. ಎಫ್. ಹಸರಾಣಿ

ಹೈದರಾಬಾದ ಕರ್ನಾಟಕ ಹಾಗೂ ಪಂಡಿತ ತಾರಾನಾಥರು —ಎನ್. ಎ. ಪಾಟೀಲ

ಭಾರತೀಯ ಸ್ತ್ರೀಯ ಬದಲಾಗುತ್ತಿರುವ ಸ್ಥಾನಮಾನಗಳು —ಆರ್. ಡಿ. ಮೊಖಾಶಿ

ಹಂಪೆ —ವಸುಂಧರಾ ಫಿಲಿಯೋಜಾ

ಅನುಭವಮಂಟಪದ ಶಿವಶರಣೆಯರು —ಶಶಿಕಲಾ ಮೋಳ್ದಿ

ಪ್ರಸಾರಾಂಗ ವಿಸ್ತರಣ ಮತ್ತು ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ - ೫೮೦೦೦೩